# ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆ

## 1. ಕಾರ್ಯಕಾರಿ ಸಾರಾಂಶ

ಕರ್ನಾಟಕ ಸರ್ಕಾರದ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವೆಗಳ ಆಯುಕ್ತಾಲಯವು 2006–07ನೇ ಸಾಲಿನಲ್ಲಿ, "ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆ" ಎಂಬ ಯೋಜನೆಯನ್ನು ಸ್ಥಳೀಯ ಗೋತಳಿಗಳ ಸಂರಕ್ಷಣೆ, ಪ್ರಸರಣೆಯನ್ನು ಸರ್ಕಾರೇತರ ಸಂಸ್ಥೆಗಳ / ವಿಶ್ವಸ್ಥಮಂಡಳಿಗಳ ಭಾಗವಹಿಸುವಿಕೆಯೊಡನೆ ರಾಜ್ಯದ ಅಂದಿನ 27 ಜಿಲ್ಲೆಗಳಲ್ಲಿ, ಅದಕ್ಕೆ ಅಗತ್ಯ ವಿರುವ ಸವಲತ್ತುಗಳನ್ನು ಅಭಿವೃದ್ಧಿ ಪಡಿಸಲು ಒಂದೇ ಒಂದು ಬಾರಿ ನೀಡಲಾಗುವ ಆರ್ಥಿಕ ಅನುದಾನ ನೀಡುವ ಮೂಲಕ ಅನುಷ್ಠಾನ ಗೊಳಿಸಲು ಉದ್ದೇಶಿಸಿ, ರೂಪಿಸಿತು.

ಸಹಜವಾಗಿಯೇ, ಪಶುಸಂಗೋಪನೆ ಹಾಗು ಪಶುವೈದ್ಯಕೀಯ ಸೇವಾ ಇಲಾಖೆಯು ಈ ಯೋಜನೆಯ ಸಫಲತೆಯ ಮುಖ್ಯ ಸಮಸ್ಯೆಗಳ ಬಗ್ಗೆ ತಿಳಿಯಲುದ್ದೇಶಿಸಿತು.

ಮೌಲ್ಯ ಮಾಪನವನ್ನು ಕೆಳಕಂಡ ರೀತಿಯಲ್ಲಿ ಮಾಡಲಾಯ್ತು

ಅ) ಲಭ್ಯ ಸಾಹಿತ್ಯದ ಅವಲೋಕನೆ

ಆ) ಯೋಜನೆಯ ಅವಶ್ಯಕತೆಯ ಕುರಿತು ಅಧ್ಯಯನ

ಇ) ಸ್ವಯಂಸೇವಾ ಸಂಸ್ಥೆಗಳ / ವಿಶ್ವಸ್ಥಮಂಡಳಿಗಳ ಅನುಭವಗಳ ಅಧ್ಯಯನ

ಯೋಜನೆಯನ್ನು ಅನುಷ್ಠಾನಗೊಳಿಸಲಾದ ಸ್ಥಳಗಳು, ಸ್ವಯಂಸೇವಾ ಸಂಸ್ಥೆಗಳು / ವಿಶ್ವಸ್ಥ ಮಂಡಳಿಗಳ ಮಾದರಿಗಳನ್ನು ಸಂಪೂರ್ಣ ಅಧ್ಯಯನಕ್ಕಾಗಿ ಆರಿಸಲಾಯ್ತು.

ರಾಜ್ಯದ ವಿವಿಧ ಭಾಗಗಳಲ್ಲಿನ ಇಲಾಖಾ ಜಾನುವಾರು ಸಂರಕ್ಷಣಾ ಕೇಂದ್ರಗಳಲ್ಲಿ ಗೋವುಗಳ ಸಂರಕ್ಷಣೆ ಹಾಗೂ ಪ್ರಸರಣ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಸರ್ಕಾರ ಸ್ಥಳೀಯತಳಿಗಳ ಸಂರಕ್ಷಣಾ ಕಾರ್ಯವನ್ನು ಹೆಚ್ಚಿಸಲು ಸ್ವಯಂಸೇವಾ ಸಂಸ್ಥೆಗಳು/ ವಿಶ್ವಸ್ಥ ಮಂಡಳಿಗಳ ಸಹಯೋಗ ಸಹಕಾರಿಯಾಗುವುದೆಂದು ಭಾವಿಸಿ, ಸದರಿ ಸಂಸ್ಥೆಗಳಿಂದ ಈ ಕಾರ್ಯದ ಅನುಷ್ಠಾನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿ, ಕೆಲ ಸಂಸ್ಥೆಗಳನ್ನು ಈ ಉದ್ದೇಶಕ್ಕಾಗಿ ಆಯ್ಕೆಮಾಡಿ, ಆರ್ಥಿಕ ಅನುದಾನವನ್ನು ಅವುಗಳಿಗೆ ಬಿಡುಗಡೆಗೊಳಿಸಿತು.

## 2. ಫಲಾನುಭವಿಗಳ ವಿಶ್ಲೇಷಣೆ ಹಾಗೂ ಉದ್ದೇಶಗಳ ಫಲಿತ

ಸ್ವಯಂಸೇವಾ ಸಂಸ್ಥೆಗಳು/ ವಿಶ್ವಸ್ಥಮಂಡಳಿಗಳು ಪಶು ಸಂರಕ್ಷಣೆ ಹಾಗೂ ಪಶುಗಳನ್ನು ಸಹಾನುಭೂತಿಯೊಡನೆ ಸಲಹುವ ಹಾಗು ಆ ಉದ್ದೇಶಕ್ಕಾಗಿ ಸ್ಥಾಪಿಸಿದ ಗೋಶಾಲೆಗಳು ಮತ್ತು ಪಿಂಜ್ರಾಪೋಲ್‌ಗಳನ್ನು ನಡೆಸುವ ಅನುಭವ ಉಳ್ಳವಾಗಿದ್ದವು. ಈ ಸಂಸ್ಥೆಗಳ ಕಾರ್ಯಕ್ಷಮತೆಯ ಪ್ರಾಥಮಿಕ ವಿಶ್ಲೇಷಣೆ ಮಾಡಲಾಯ್ತು, ಆ ಮೂಲಕ ಅವುಗಳ ವಿವರವಾದ ವಿಶ್ಲೇಷಣೆ ಅಗತ್ಯವಾಯ್ತು.

# 3.ಸಾಮಗ್ರಿ ಮತ್ತು ರೀತಿಗಳು

2006–07 ನೇ ಸಾಲಿನಿಂದ 2013–14ನೇ ಸಾಲಿನವರೆಗೆ, ದೇಶೀ ತಳಿಗಳ ಸಂರಕ್ಷಣೆಯ ಸಲುವಾಗಿ 47 ಆಯ್ದ ಸ್ವಯಂಸೇವಾಸಂಸ್ಥೆಗಳು / ವಿಶ್ವಸ್ಥ ಮಂಡಳಿಗಳಿಗೆ ಆರ್ಥಿಕ ಅನುದಾನವನ್ನು ನೀಡಲಾಯಿತು.

ಈ ಸ್ವಯಂಸೇವಾ ಸಂಸ್ಥೆಗಳು / ವಿಶ್ವಸ್ಥ ಮಂಡಳಿಗಳು ಹೆಚ್ಚಾಗಿ ಧಾರ್ಮಿಕ ಸಂಸ್ಥೆಗಳಾಗಿದ್ದು, ರಾಸುಗಳ ತಳಿ ಮತ್ತು ಉತ್ಪಾದಕತೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವುಗಳನ್ನು ತಾವು ನಡೆಸುವ ಗೋಶಾಲೆಗಳು ಗೋಸದನಗಳು ಮತ್ತು ಪಿಂಜ್ರಾಪೋಲುಗಳಲ್ಲಿ ಸಲಹುವ ಕಾರ್ಯದಲ್ಲಿ ತೊಡಗಿಕೊಡಿದ್ದವು.

ಉದ್ದೇಶಿತ ಮಾದರಿ (ಪರ್ಪಸಿವ್ ಸ್ಯಾಂಪ್ಲಿಂಗ್) ರೀತಿಯಲ್ಲಿ, ರಾಜ್ಯದ ನಾಲ್ಕು ವಿಭಾಗಗಳಲ್ಲಿ ವಿಭಾಗಕ್ಕೆ ಒಂದೊಂದರಂತೆ ಸ್ವಯಂಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡಲಾಯಿತು, ತನ್ಮೂಲಕ ಆರು ಸ್ಥಳೀಯ ತಳಿಗಳನ್ನು ಇಟ್ಟಿರುವ ಮತ್ತು ಸರ್ಕಾರದ ಅನುದಾನವನ್ನು ಈ ಯೋಜನೆಯಡಿಯಲ್ಲಿ ಪಡೆದು ಸ್ಥಳೀಯ ತಳಿಗಳ ತಳಿವರ್ಧನೆ, ಸಂರಕ್ಷಣೆ, ಮತ್ತು ಪ್ರಸರಣೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಸಂಸ್ಥೆಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಮೈಸೂರು ವಿಭಾಗದಲ್ಲಿ ಒಂದು ಸಂಸ್ಥೆಗೆ ಬದಲಾಗಿ ಎರಡು ಸಂಸ್ಥೆಗಳನ್ನು ಮಾದರಿಯಾಗಿ ಆರಿಸಲಾಯಿತು.

ಮೌಲ್ಯಮಾಪನ ಉದ್ದೇಶಕ್ಕಾಗಿ ವಿಭಾಗವಾರು ಆಯ್ಕೆಮಾಡಲಾದ ಸಂಸ್ಥೆಗಳು ಈ ಕೆಳಗಿನಂತಿವೆ.

ಬೆಂಗಳೂರು ವಿಭಾಗ – ಅಮೃತಧಾರಾಗೋಶಾಲೆ, ಶ್ರೀ ರಾಮಚಂದ್ರಾಪುರ ಮಠ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಮೈಸೂರು ವಿಭಾಗ – (ಅ) ಶ್ರೀ ಕ್ಷೇತ್ರ ಧರ್ಮಸ್ಥಳ ಗೋಶಾಲೆ, ಕೊಕ್ಕಡ, ಬೆಳ್ತಂಗಡಿ ತಾಲ್ಲೂಕು ದಕ್ಷಿಣ ಕನ್ನಡಜಿಲ್ಲೆ.

(ಆ) ನಂದಗೋಕುಲ ಚಾರಿಟೇಬಲ್ ಟ್ರಸ್ಟ್ ಅಮೃತಧಾರಾ ಗೋಶಾಲೆ, ಗೋಳಿಗುಂಡಿ ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.

ಬೆಳಗಾವಿ ವಿಭಾಗ – ಅಮೃತಧಾರಾಗೋಶಾಲೆ, ಹೊಸಾಡ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ಕಲಬುರಗಿ ವಿಭಾಗ – ಶ್ರೀ ಎಸ್.ಜಿ.ಎಸ್.ಬಿ.ವಿ. ಟ್ರಸ್ಟ್, ಚಿಕ್ಕ ಸೂಗೂರು ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ.

ಈ ಅಧ್ಯಯನದ ಉದ್ದೇಶ, ಸದರಿ ಯೋಜನೆಯನ್ನು ಎಷ್ಟರಮಟ್ಟಿಗೆ ಅನುಷ್ಠಾನ ಗೊಳಿಸಲಾಗಿದೆ ಮತ್ತು ಅದರಿಂದಾದ ಪರಿಣಾಮವೇನು ಎಂಬುದನ್ನು ತಿಳಿಯುವುದಾಗಿರುತ್ತದೆ. ಇದು ಸರ್ಕಾರ ಹಾಗೂ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಗಳು ಈ ಯೋಜನೆಯ ಅನುಷ್ಠಾನದಲ್ಲಿನ ಸಮಸ್ಯೆಗಳೇನಾದರೂ ಇದ್ದಲ್ಲಿ ಅವುಗಳನ್ನು ತಿಳಿದುಕೊಳ್ಳಲು ಹಾಗೂ ಯೋಜನೆಯನ್ನು ಈಗಿರುವಂತೆ ಮುಂದುವರಿಸುವುದೇ ಅಥವಾ ಬೇಡವೆ ಎಂಬ ವಿಷಯ ನಿರ್ಣಯಿಸಲು ಸಹಕಾರಿಯಾಗುತ್ತದೆ.

# 4.ವಿಷಯ ಪ್ರವೇಶ

ಪಶುಪಾಲನೆ ಕೃಷಿ ಕ್ಷೇತ್ರದ ಒಂದು ಅವಿಭಾಜ್ಯ ಅಂಗ, ಪ್ರಮುಖವಾಗಿ ಪಶುಗಳ ಸುಮಾರು ಶೇ.70ರಷ್ಟು ಸಂಖ್ಯೆ, ದೇಶದ ಸಣ್ಣ ಮತ್ತು ಅತಿ ಸಣ್ಣ ರೈತರ ಹತ್ತಿರ ಇವೆ. ಈ ರೈತರು ದೇಶದ ಶೇಕಡಾ 30 ರಷ್ಟು ಭೂಮಿಯನ್ನು ಮಾತ್ರ ಹೊಂದಿರುತ್ತಾರೆ. ಜೀವಿಸಂಕುಲದಲ್ಲಿ ಮಾನವ ಹಾಗೂ ಪ್ರಾಣಿಗಳ ಸಮತೋಲನ, ಪ್ರಾಣಿಗಳ ಸಂರಕ್ಷಣೆಗೆ ಅಗತ್ಯವಾಗಿರುತ್ತದೆ. ಹಳ್ಳಿಗಳ ಹೆಣ್ಣುಮಕ್ಕಳು, ಪಶುಗಳ ಸಾಕಣೆ, ಶುಚಿಗೊಳಿಸುವಿಕೆ, ಆಹಾರ ನೀಡಿಕೆ, ಹಾಲು ಉತ್ಪಾದನೆ ಮುಂತಾದ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಅಂತೆಯೇ ಪಶುಪಾಲನಾ ಚಟುವಟಿಕೆಗಳು ಸಾಮಾಜಿಕ–ಆರ್ಥಿಕ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ಹಸುಗಳು ಹಾಗೂ ಹೈನೋತ್ಪನ್ನಗಳು ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ. ಮಾನವ – ಪಶುಗಳು ಪರಸ್ಪರ ಭೂಮಿಹಾಗೂ ಸಸ್ಯಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಹಾಲು ಮತ್ತು ಹಾಲಿನ ಉತ್ಪನ್ನಗಳು ಪರಿಪೂರ್ಣ ಆಹಾರಗಳಾಗಿದ್ದು, ಅಗತ್ಯ ಪೋಷಕಾಂಶಗಳನ್ನೊಳಗೊಂಡಿವೆ, ದನಗಳು ಉಳುಮೆ, ಸಾಗಣೆ ಮುಂತಾದ ಚಟುವಟಿಕೆಗಳಿಗೆ ಅಗತ್ಯ ಶಕ್ತಿಯನ್ನೊದಗಿಸುತ್ತಿವೆ. ಸಗಣಿಯು ಗೊಬ್ಬರ ಒದಗಿಸುವುದರೊಂದಿಗೇ, ಬಯೋಗ್ಯಾಸ್‌ನಂತಹ ಊರ್ಜ್ಯಗಳನ್ನೊಗಿಸುತ್ತಿದೆ.

ದನಗಳು, ಸಾಧುವಾಗಿಸಿಕೊಂಡು ಹಾಲುಹಯನು ಮತ್ತು ಹೇರಿಗಾಗಿ ಪಳಗಿಸಿಕೊಳ್ಳಲ್ಪಟ್ಟ ಪ್ರಾಣಿಗಳಲ್ಲಿ ಮೊದಲಿನವಾಗಿವೆ. ಚಾರಿತ್ರ್ಯಕವಾಗಿ ದಾಖಲೆಗಳು ಇಲ್ಲದಿದ್ಯಾಗ್ಯೂ ಏಷ್ಯಾ ಹಾಗೂ ಯೂರೋಪ್‌ಗಳಲ್ಲಿ ಸುಮಾರು 8500ವರ್ಷಗಳ ಹಿಂದೆಯೇ ದನಗಳನ್ನು ಪಳಗಿಸಿ, ಸಾಕು ಪ್ರಾಣಿಗಳನ್ನಾಗಿ ಇಟ್ಟುಕೊಳ್ಳಲಾಗಿದೆಯೆಂದು ಊಹೆ ಮಾಡಲಾಗಿದೆ.

ದನಗಳ ಎರಡು ಪ್ರಮುಖ ಪ್ರಭೇದಗಳೆಂದರೆ ಬೋವಿಡೆ ಕುಟುಂಬದ, ಬಾಸ್, ಜೀನಸ್‌ಗೆ ಸೇರಿದ, ಬ್ರಹ್ಮನ್ ಮತ್ತು ಝುಬು ದನಗಳು, ಇವುಗಳಲ್ಲಿ ಎರಡು ತಳಿಗಳು–ಇಂಡಿಕಸ್ ಮತ್ತು ಟಾರಸ್. ಇಂದಿನ ಬಹುತೇಕ ತಳಿಗಳು, ಅವುಗಳಿಂದ ಅಭಿವೃದ್ಧಿಗೊಂಡವು ಮತ್ತು ಅನೇಕ ಸಮಯದ ತಳಿವೃದ್ಧಿ ಪ್ರಕ್ರಿಯೆಗಳ ಫಲಿತಾಂಶವೇ ಆಗಿವೆ. ವಂಶಗಳಲ್ಲಿನ ವ್ಯತ್ಯಾಸಗಳು ಕೆಲತಳಿಗಳಲ್ಲಿನ, ಮಿಶ್ರ ತಳಿವೃದ್ಧಿ ಚಟುವಟಿಕೆಗಳ ಕಾರಣಗಳಿಂದಲೇ ಆಗಿವೆ.

ಸ್ಥಳೀಯ ತಳಿಕಿಣ್ವ ಹಾಗೂ ಸ್ಥಳೀಯವಾಗಿ ಹೊಂದಿಕೊಂಡಿರುವ ತಳಿಗಳು  ಕ್ಷೀಣಿಸುತ್ತಿರುವ ಬಗ್ಗೆ ತೀವ್ರ ಕಳಕಳಿ ವ್ಯಕ್ತವಾಗುತ್ತಿರುವುದು ಇತ್ತೀಚೆಗೆ ಕಂಡುಬರುತ್ತಿದೆ. ಏಕೆಂದರೆ ಆ ತಳಿಗಳು ಸಧೃಡವಾಗಿದ್ದು ಸ್ಥಳೀಯ ಹವಾಮಾನಕ್ಕೆ ಹೊಂದಿಕೊಂಡು, ಖಾಯಿಲೆ ತಡೆದುಕೊಳ್ಳುವ ಶಕ್ತಿ ಹಾಗೂ ಮಹತ್ವ ಮನಗಂಡಿರುವುದು. ಕಡಿಮೆ ದರ್ಜೆಯ ಆಹಾರ ವಸ್ತುಗಳನ್ನು ಸೇವಿಸಿ, ಹೆಚ್ಚು ಉತ್ಪಾದಿಸುವ ಈ ತಳಿಗಳ ಮಹತ್ವ ಸ್ವಯಂವೇದ್ಯ

# 5.ಮೌಲ್ಯ ಮಾಪನದ ಅವಶ್ಯಕತೆ

ಕರ್ನಾಟಕ ಸರ್ಕಾರವು, ಸ್ಥಳೀಯ ಗೋತಳಿಗಳ ಸಂರಕ್ಷಣೆ, ತಳಿವರ್ಧನೆ ಮತ್ತು ಪ್ರಸರಣದ ಆಶಾಪೂರ್ಣ ಉದ್ದೇಶವನ್ನಿಟ್ಟುಕೊಂಡು, ಗೋವುಗಳನ್ನು ಸಾಕುತ್ತಿರುವ ಹಾಗೂ ಅದರಲ್ಲಿನ ಅನುಭವ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳು/ ವಿಶ್ವಸ್ಥ ಮಂಡಳಿಗಳ ಮೂಲಕ ಅವುಗಳ ಅನುಭವಗಳನ್ನು ಉಪಯೋಗಿಸಿಕೊಳ್ಳುವ ಹಾಗೂ ಸರ್ಕಾರಿ ಗೋಸಂವರ್ಧನಾ ಕೇಂದ್ರಗಳ ಕಾರ್ಯಕ್ಷಮತೆಯೊಡನೆ ಇನ್ನು ಹೆಚ್ಚು ಕ್ಷಮತೆ ಹೊಂದುವ ಉದ್ದೇಶ ಹೊಂದಿತ್ತು.

ಆದುದರಿಂದ ಸಹಜವಾಗಿ ಸರ್ಕಾರ ಮೇಲ್ಕಂಡ ಆಶಯದ ಸಫಲತೆ ಹಾಗೂ ಪರಿಣಾಮಗಳನ್ನು ತಿಳಿದುಕೊಳ್ಳಲು ಉದ್ದೇಶಿಸಿದ್ದರಿಂದ, ಈ ಮೌಲ್ಯ ಮಾಪನ ಮಾಡಲಾಯಿತು

# 6.ಉದ್ದೇಶಗಳು

ದೇಶೀತಳಿಗಳಾದ ಅಮೃತಮಹಲ್, ಹಳ್ಳಿಕಾರ್, ದೇವನಿ, ಖಿಲಾರ್, ಕೃಷ್ಣಾವ್ಯಾಲಿ, ಮಲನಾಡಗಿಡ್ಡ ಮೊದಲಾದ ತಳಿಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕರ್ನಾಟಕ ಸರಕಾರದ, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು "ಸುವರ್ಣಕರ್ನಾಟಕ ಗೋತಳಿ ಸಂರಕ್ಷಣ ಯೋಜನೆ"ಯನ್ನು ಸರ್ಕಾರಿ ಆದೇಶ ಸಂಖ್ಯೆ ಪಸಂಮೀ 53 ಪಪಾಯೋ ಬೆಂಗಳೂರು ದಿನಾಂಕ 19–12–2006ರ ಮೂಲಕ, ಮಂಜೂರು ಮಾಡಿತು.

## 7. ಸ್ವಯಂಸೇವಾ ಸಂಸ್ಥೆ/ ವಿಶ್ವಸ್ಥ ಮಂಡಳಿಗಳ ಆಯ್ಕೆಯ ಅರ್ಹತೆ

ದೇಶೀ ತಳಿಗಳ, ಸಂಗೋಪನೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸ್ವಯಂ ಸೇವಾ ಸಂಸ್ಥೆ / ವಿಶ್ವಸ್ಥ ಮಂಡಳಿಗಳು ಅಭಿವೃದ್ಧಿಪಡಿಸಿಕೊಳ್ಳಲು ಒಂದು ಬಾರಿ ಮಾತ್ರ ನೀಡಲಾಗುವ ಅನುದಾನವನ್ನು ಕೊಡುವ ಉದ್ದೇಶ ಹೊಂದಿದೆ.

ಕರ್ನಾಟಕ ಸರಕಾರದ ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಸೇವಾ ಇಲಾಖೆಯು, ಯೋಜನೆಯ ಅನುಷ್ಠಾನಕ್ಕಾಗಿ ಆಸಕ್ತ ಸಂಸ್ಥೆಗಳಿಗೆ ಕೆಳಕಂಡ ಷರತ್ತುಗಳನ್ನು ವಿಧಿಸಿದೆ. ಅವುಗಳೆಂದರೆ ಕನಿಷ್ಠ 10 ಎಕರೆ ಭೂಮಿಯನ್ನು ಹೊಂದಿರಬೇಕು ಪಶು ಸಂಗೋಪನೆಯಲ್ಲಿ ಅನುಭವಿರಬೇಕು, ಅವು ತಮ್ಮ ಸಂಸ್ಥೆಗಳಲ್ಲಿ ಕನಿಷ್ಠ 50 ಜಾನುವಾರುಗಳನ್ನು ಸಾಕುತ್ತಿರಬೇಕು ಇತ್ಯಾದಿ. ಅಂತಹ ಸಂಸ್ಥೆಗಳು ತಮ್ಮಲ್ಲಿರುವ ಸೌಲಭ್ಯಗಳಿಂದ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುದಾನ ಪಡೆಯಲು ಅರ್ಹವಾಗಿರುತ್ತವೆ.

ಮೇಲ್ಕಂಡ ಅರ್ಹತೆಗಳನ್ನುಳ್ಳ ಸಂಸ್ಥೆಗಳು ಒಮ್ಮೆ ಆಯ್ಕೆಯಾದ ಮೇಲೆ, ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ನಂತರ, ಅನುದಾನ ಬಿಡುಗಡೆ ಮಾಡಲಾಗುತ್ತದೆ. ಸದರಿ ಯೋಜನೆಯು 2006–2007ರ ವರ್ಷದಿಂದ ಪ್ರಾರಂಭಗೊಂಡು 2012–13ರವರೆಗೆ ಮುಂದುವರೆದಿದೆ.

# 8.ಸಾಹಿತ್ಯಾವಲೋಕನ

ಒಂದೇ, ರೂಪ, ನಡತೆ ಇನ್ನಿತರೇ ಗುಣಗಳನ್ನು ಹೊಂದಿರುವ ಪ್ರಾಣಿಗಳನ್ನು ಒಂದು ನಿರ್ದಿಷ್ಟ 'ತಳಿ' ಎಂಬುದಾಗಿ ಗುರ್ತಿಸಲಾಗುತ್ತದೆ. ಇವುಗಳನ್ನು ಅನಪೇಕ್ಷಿತ ಗುಣಗಳನ್ನು ತೆಗೆದುಹಾಕುವಿಕೆ, ಹಾಗೂ ಅಪೇಕ್ಷಿತ ಗುಣಗಳನ್ನು ಆಯ್ಕೆ ಮಾಡಿಕೊಳ್ಳುವ ಕ್ರಿಯೆಯ ಮೂಲಕ ಅಭಿವೃದ್ಧಿ ಪಡಿಸಲಾಗಿದೆ. ಹಾಗೂ ತಳಿ ವೃದ್ಧಿಗಾಗಿ ಉಪಯೋಗಿಸಿಕೊಳ್ಳಲಾಗಿದೆ.

ಗುರ್ತಿಸಲ್ಪಟ್ಟ ಒಂದೇ ವಂಶಾವಳಿ ಉಳ್ಳ ಪಶುಗಳನ್ನು ಶುದ್ಧತಳಿ ಎಂದು ಕರೆಯಲಾಗುತ್ತದೆ. ಆಂತರಿಕ ತಳಿವರ್ಧನೆ, ಗುಂಪುಗಳ ನಡುವಿನ ತಳಿವರ್ಧನೆ. ತಂಡ ತಳಿವರ್ಧನೆ ಮತ್ತು ವಿವಿಧ ತಳಿಗಳೊಳಗಿನ ಗುಂಪುಗಳ ತಳಿವರ್ಧನೆ ವಿಧಾನಗಳನ್ನು ಅನುಸರಿಸಿ ಇವುಗಳ ಸಂರಕ್ಷಣೆ ಮಾಡಲಾಗುತ್ತದೆ.

2002ನೇ ಸಾಲಿನಲ್ಲಿ ಭಾರತ ಸರ್ಕಾರ, ರಾಷ್ಟ್ರೀಯ ಪಶುಗಳ ಆಯೋಗವೊಂದನ್ನು, ಕೆಳಕಂಡ ಉದ್ದೇಶಗಳಿಗಾಗಿ ಸ್ಥಾಪಿಸಿತು. ಅವುಗಳೆಂದರೆ.

1) ಹಸುಗಳ ಮತ್ತು ಅವುಗಳ ಸಂತಾನದ ರಕ್ಷಣೆ, ಸಂರಕ್ಷಣೆ, ಅಭಿವೃದ್ಧಿ ಹಾಗೂ ಕ್ಷೇಮದ ಕಾನೂನಿನ ಕಡೆಗಮನಹರಿಸಿ ಅವುಗಳ ಸೂಕ್ತ ಅನುಷ್ಠಾನಗಳ ಪರಾಮರ್ಶೆ,
2) ಪ್ರಸ್ತುತ ಇರುವ ಗೋಶಾಲೆಗಳು, ಗೋಸದನಗಳು, ಪಿಂಜ್ರಾಪೋಲುಗಳು ಮತ್ತಿತರ ಅಂತಹ ಸಂಸ್ಥೆಗಳನ್ನು ನಡೆಸಲು ಇರುವ ಅನುಕೂಲಗಳ ಅಧ್ಯಯನ ಹಾಗೂ ಅವುಗಳ ಆರ್ಥಿಕ ಕಾರ್ಯಸಾಧ್ಯತೆಯಲ್ಲಿನ ಸುಧಾರಣೆ.
3) ಪಶುಗಳಿಂದ ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯ ಪಾಲಿನ ಬಗ್ಗೆ ಅಧ್ಯಯನ ಹಾಗೂ ಹಸುಗಳ ಉತ್ಪಾದನೆ ಗಳನ್ನು, ಆಹಾರ, ಆರೋಗ್ಯ, ಕೃಷಿ ಹಾಗೂ ಹೇರು ಶಕ್ತಿ ಮುಂತಾದವುಗಳನ್ನು ಗರಿಷ್ಠವಾಗಿ ಉಪಯೋಗ ಪಡಿಸುವ ಆಗುಹೋಗುಗಳ ಹಾಗೂ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಸಲಹೆ ನೀಡುವುದು.
4) ಉತ್ತಮ ಆಹಾರ ಮತ್ತು ಮೇವುಗಳ ಲಭ್ಯತೆಯನ್ನು ಹೆಚ್ಚಿಸಲು ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡುವುದು.

ಸ್ಥಳೀಯ ತಳಿಗಳು ತಮ್ಮ ಸಂತಾನೋತ್ಪತ್ತಿ ಪ್ರದೇಶ/ವಾಸಸ್ಥಳಗಳಿಗೆ ನಿರ್ದಿಷ್ಟವಾಗಿರುತ್ತವೆ ಮತ್ತು ಅವುಗಳನ್ನು ಅವು ವಾಸಿಸುವ ಪ್ರದೇಶಗಳನ್ನು ಪರಿಗಣಿಸಿ ಮತ್ತು ಅವುಗಳ ಉತ್ಪಾದಕ ಗುಣಗಳನ್ನು ಅವಲಂಬಿಸಿ ವಿಂಗಡಿಸಲಾಗುತ್ತದೆ.

10ನೇ ಪಂಚವಾರ್ಷಿಕ ಯೋಜನೆಯ (2002–2007) ಅಡಿಯಲ್ಲಿ ಯೋಜನಾ ಆಯೋಗದಿಂದ ಸ್ಥಾಪಿಸಲ್ಪಟ್ಟ ಕಾರ್ಯತಂಡದ ಶಿಫಾರಸ್ಸಿನ ಮೇಲೆ ತಳಿ ಅಭಿವೃದ್ಧಿ ನೀತಿಯನ್ನು ಭಾರತದಲ್ಲಿ ಅಳವಡಿಸಿಕೊಳ್ಳಲಾಯಿತು ಮತ್ತು ಅದನ್ನು ರಾಷ್ಟ್ರೀಯ ಹಸು ಮತ್ತು ಎಮ್ಮೆಗಳ ತಳಿ ಅಭಿವೃದ್ಧಿ ಯೋಜನೆ ಎಂದು ಕರೆಯಲಾಗುತ್ತದೆ. ಹಾಗೂ ಅಕ್ಟೋಬರ್ 2002 ರಿಂದ ಅನುಷ್ಠಾನಗೊಳಿಸಲಾಗಿದೆ. ಇದು ಸ್ಥಳೀಯ ತಳಿಗಳನ್ನು ಅವುಗಳ ಸಂತಾನೋತ್ಪತ್ತಿ ಪ್ರದೇಶಗಳಲ್ಲಿಯೇ ತಳಿ ಸಂವರ್ಧನೆಗೊಳಿಸಲು ಗಮನೀಕರಿಸಲಾಗುತ್ತದೆ ಮತ್ತು ಹಾಗೆ ಉನ್ನತೀಕರಿಸಲಾದ ಪಶುಗಳನ್ನು, ಅಮಾನ್ಯ ತಳಿಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.

ಮೇಲ್ಕಂಡ ಅಂಶವನ್ನು ರಾಷ್ಟ್ರದೆಲ್ಲೆಡೆ ಒಪ್ಪಿಕೊಳ್ಳಲಾಗಿದೆಯಾದರೂ ತಳಿ ಅಭಿವೃದ್ಧಿ ಸಂಘಗಳು, ಸಂಸ್ಥೆಗಳು ಮತ್ತು ಅಂತಹುದೇ ರೈತ ಸಂಘಟನೆಗಳನ್ನು ಸ್ಥಾಪಿಸುವಲ್ಲಿ ತೋರಲಾದ ಅನಾಸ್ಥೆಯಿಂದಾಗಿ ದೇಶೀಯ ತಳಿಗಳು ಕ್ರಮೇಣ ನಶಿಸುತ್ತಿವೆ. ಅಲ್ಲದೆ ಮೇಲೆ ಹೆಸರಿಸಲಾದ ಕಾರ್ಯತಂಡ ತಳಿ ಅಭಿವೃದ್ಧಿಯ ನೀತಿಯನ್ನು ಬಹಳವಾಗಿ ಉಪೇಕ್ಷಿಲ್ಪಟ್ಟಿದೆಯೆಂದೂ ಮತ್ತು ದೇಶೀ ತಳಿಗಳನ್ನು ಅವುಗಳ ನೈಸರ್ಗಿಕ ಪ್ರದೇಶಗಳಲ್ಲೇ ಸಂರಕ್ಷಿಸ ಬೇಕೆಂದೂ ಸಲಹೆ ಇತ್ತಿದೆ. ಅಲ್ಲದೆ ಈ ಕಾರ್ಯದ ವಸ್ತುಸ್ಥಿತಿ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾದ ಅಗತ್ಯತೆ ಇರುವುದನ್ನು ಎತ್ತಿ ತೋರಿಸಿದೆ. ಪಶುಗಳು ನೈಸರ್ಗಿಕ ಪ್ರದೇಶಗಳು ಬಹಳವಾಗಿ ಬದಲಾಗಿರುವಿಕೆ, ಪಶುಗಳ ಗುಣ ವಿಶೇಷಣಗಳು ಕಳೆದ ಕೆಲ ದಶಕಗಳಲ್ಲಿ ವ್ಯತ್ಯಾಸ ಹೊಂದಿರುವುದನ್ನುಗಮನಿಸಿರುವುದಲ್ಲದೆ, ಕಾರಣಗಳೇನೇ ಇರಲಿ ರೈತರಲ್ಲಿ ಅಂತಹ ತಳಿಗಳ ಬಗ್ಗೆ ಅನಾಸಕ್ತಿ ಇರುವುದನ್ನು ಗಮನಿಸಿ, ಅಂತಹವುಗಳನ್ನು ಗುರ್ತಿಸಿ ಸಾಂಸ್ಥಿಕ ಕ್ಷೇತ್ರಗಳಲ್ಲಿ ಮಾತ್ರ ಉತ್ತಮ ತಳಿವೃದ್ಧಿ ತಂತ್ರಗಳನ್ನು ಅನುಸರಿಸಿ, ಅಭಿವೃದ್ಧಿ ಪಡಿಸಬೇಕೆಂದು ಅಭಿಪ್ರಾಯ ಪಟ್ಟಿರುತ್ತದೆ.

ಎಂ. ಎ ಖುದ್ದಸ್ ಮತ್ತು ಎಂ.ಆರ್. ಅಮಿನ್ (2010) ರವರುಗಳೂ ಸಹಾ, ಸ್ಥಳೀಯ ತಳಿಗಳು, ಆಹಾರ, ಕೃಷಿ ಊಜ್ಜನ, ಕೃಷಿಕ ಸಂಸ್ಕೃತಿ, ಜೈವಿಕ ವೈವಿಧ್ಯತೆಗಳ ಮಹತ್ವಪೂರ್ಣ ಪೂರಕಗಳು ಎಂದು ಅಭಿಪ್ರಾಯ ಪಟ್ಟಿದ್ದಾರೆ (ಎಫ್.ಎ.ಓ. 2007 ಎ)

ಆದರೆ ಕಡಿಮೆ ಹೂಡಿಕೆ ಮತ್ತು ಕಡಿಮೆ ಉತ್ಪಾದಕವುಳ್ಳದ್ದಾಗಿರುವುದರಿಂದ, ಅಧಿಕ ಉತ್ಪಾದನೆ ಮಾಡುವ ವಿದೇಶೀ ತಳಿಗಳು ಮತ್ತು ಅವುಗಳ ಮಿಶ್ರ ತಳಿಗಳನ್ನು ಬದಲಿಯಾಗಿ ಹಾಗೂ ನಿಧಾನವಾಗಿ ಬಳಸುತ್ತಿರುವುದು ಪ್ರಾಣಿಗಳ ಉತ್ಪಾದಕತೆ ಹೆಚ್ಚಿಸುವಲ್ಲಿ ಹೆಚ್ಚಾಗಿ ತೊಡಗಿಸಿರುವುದು ತಿಳಿಯುತ್ತದೆ.

ವಿಶ್ವದಾದ್ಯಂತ 2000–2006 ರ ಅವಧಿಯಲ್ಲಿ ಅಜಮಾಸು ಪ್ರತಿ ತಿಂಗಳೂ ಒಂದೊಂದು ಸ್ಥಳೀಯ ತಳಿಗಳು ಅದೃಶ್ಯವಾಗಿವೆಯೆಂದು ವರದಿಮಾಡಲಾಗಿದೆ (ಎಫ್.ಎ.ಓ. 2008). ಸುಮಾರು ಶೇಕಡಾ 20 ರಷ್ಟು ವರದಿ ಮಾಡಲ್ಪಟ್ಟ ತಳಿಗಳು ವಿನಾಶದ ಅಂಚಿನಲ್ಲಿವೆ (ಎಫ್.ಎ.ಓ, 2007 ಬಿ). ಇದ್ದಕ್ಕಿದ್ದ ಹಾಗೆ ತಳಿಗಳನ್ನು ಬದಲಿಸುವಿಕೆ ಅಥವಾ ಸ್ಥಳೀಯ ತಳಿಗಳನ್ನು ತೆಗೆದು ಹಾಕಲಾಗುವಿಕೆ ಈಗಿರುವಂತೆ ಮುಂದುವರೆದಲ್ಲಿ, ಸಾಂಪ್ರದಾಯಿಕ ಕೃಷಿಯನ್ನು ಅವಲಂಬಿಸಿರುವ ಜನಗಳಲ್ಲಿ ನಿರುದ್ಯೋಗತನ ಜೊತೆ ಜೊತೆಯಾಗಿಯೇ ಹೆಚ್ಚಿ, ಗ್ರಾಮೀಣ ಆರ್ಥಿಕತೆಯು ಅನಿವಾರ್ಯ ಅವನತಿಯೆಡೆಗೆ ಕೊಂಡೊಯ್ಯುವ ಸಾಧ್ಯತೆ ಇದೆ ಎಂದೂ ಅಭಿಪ್ರಾಯ ಪಡಲಾಗಿದೆ.

ಕರ್ನಾಟಕ ರಾಜ್ಯವು, ಉತ್ತಮ ತಳಿ ಅಭಿವೃದ್ಧಿ ನೀತಿಯನ್ನು ಹೊಂದಿದ್ದು, ಕೆಳಕಂಡ ಜಾನುವಾರು ತಳಿ ಅಭಿವೃದ್ಧಿ ಕೇಂದ್ರಗಳನ್ನು ಅವುಗಳ ಮುಂದೆ ತೋರಿಸಿದಂತೆ, ವಿವಿಧ ತಳಿಗಳ ವರ್ಧನೆಗಾಗಿ ಸ್ಥಾಪಿಸಿದೆ

ಅವುಗಳಲ್ಲಿ ಕೆಲವು ಕೆಳಕಂಡಂತಿವೆ.

| ಕೇಂದ್ರ | ತಳಿಗಳು |
|---|---|
| 1 ತಳಿಸಂವರ್ಧನಾಕೇಂದ್ರ ಅಜ್ಜಂಪುರ – | ಅಮೃತಮಹಲ್ |
| 2 ತಳಿಸಂವರ್ಧನಾಕೇಂದ್ರ ಹೆಸರಘಟ್ಟ – | ಹಳ್ಳಿಕಾರ್ |
| 3 ತಳಿಸಂವರ್ಧನಾಕೇಂದ್ರ ಕೊಯ್ಲಾ – | ಹಳ್ಳಿಕಾರ್, ಗೀರ್ |
| 4 ತಳಿಸಂವರ್ಧನಾಕೇಂದ್ರ ಧಾರವಾಡ – | ದೇವನಿ |
| 5 ತಳಿಸಂವರ್ಧನಾಕೇಂದ್ರ ಬಂಕಾಪುರ – | ಖಿಲ್ಲಾರ್ ಮತ್ತು ಕೃಷ್ಣಾವ್ಯಾಲಿ |
| 6 ತಳಿಸಂವರ್ಧನಾಕೇಂದ್ರ ಮುನಿರಾಬಾದ್ – | ಕೃಷ್ಣಾವ್ಯಾಲಿ |
| 7 ತಳಿಸಂವರ್ಧನಾಕೇಂದ್ರ ಕುರಿಕುಪ್ಪಿ – | ಕೃಷ್ಣಾವ್ಯಾಲಿ |

ಕರ್ನಾಟಕ ರಾಜ್ಯದ ವಿವಿಧ ದೇಶಿ ತಳಿಗಳು ಮತ್ತು ಅವುಗಳ ವಾಸ ಪ್ರದೇಶ (ತಾಯಿನೆಲ) ಕೆಳಕಂಡಂತಿದೆ

| <u>**ತಳಿಗಳು**</u> | | <u>**ಜಿಲ್ಲೆಗಳು**</u> |
|---|---|---|
| 1 ಅಮೃತ್ ಮಹಲ್ | – | ಹಾಸನ, ಚಿಕ್ಕಮಗಳೂರು ಮತ್ತು ತುಮಕೂರು |
| 2 ಹಳ್ಳಿಕಾರ್ | – | ಮಂಡ್ಯ, ಮೈಸೂರು ಮತ್ತು ತುಮಕೂರು |
| 3 ದೇವನಿ | – | ಮಹಾರಾಷ್ಟ್ರದ ಮರಾಠವಾಡ ಪ್ರದೇಶ ಮತ್ತು ಕರ್ನಾಟಕದ ಬೀದರ್ ಜಿಲ್ಲೆ |
| 4 ಖಿಲ್ಲಾರ್ | – | ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಪ್ರದೇಶಗಳು |
| 5 ಕೃಷ್ಣಾವ್ಯಾಲಿ | – | ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಉತ್ತರ ಕರ್ನಾಟಕದ ಪ್ರದೇಶಗಳು |
| 6 ಮಲನಾಡ ಗಿಡ್ಡ | – | ಕರ್ನಾಟಕ ರಾಜ್ಯದ ಸಂಪೂರ್ಣ ಮಲೆನಾಡುಹಾಗು ಕರಾವಳಿ ಪ್ರದೇಶಗಳು |

ಪ್ರಸ್ತುತ ಇರುವ ಭಾರತೀಯ ತಳಿಗಳು, ಎರಡು ಅಥವಾ ಹೆಚ್ಚು ಹಳೆಯ ತಳಿಗಳಿಂದ ಅಭಿವೃದ್ಧಿ ಪಡಿಸಲ್ಪಟ್ಟಿವೆ ಮತ್ತು ಬಹಳಕಾಲದಿಂದ, ಬಣ್ಣ, ಆಕಾರ, ತೂಕ, ಗಾತ್ರ ಮತ್ತು ಕಾರ್ಯಕ್ಷಮತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ವೃದ್ಧಿಪಡಿಸಲಾಗಿವೆ ಮತ್ತು ಅವು ತಮ್ಮ ಸಂತಾನಕ್ಕೆ ತಮ್ಮ ಎಲ್ಲಾ ಗುಣಲಕ್ಷಣಗಳನ್ನು ವಂಶವಾಹಿಯಾಗಿ ಕೊಡಲು ಸಮರ್ಥವಾಗಿರುತ್ತವೆ.

ಭಾರತೀಯ ತಳಿಗಳು ಹಾಗೂ ಅವುಗಳ ವಂಶವಾಹಿಗಳನ್ನು ಅಧಿಕೃತವಾಗಿ ಪರದೇಶಗಳಿಗೆ ರಫ್ತು ಮಾಡಿಲ್ಲವಾದರೂ, ಹೊರದೇಶಗಳಲ್ಲಿ ಅಲ್ಲಿನ ತಳಿಗಳಲ್ಲಿನ ಮಾಂಸದ ಗುಣಮಟ್ಟದ ಅಭಿವೃದ್ಧಿಯ ಉದ್ದೇಶದಿಂದ ನಮ್ಮ ತಳಿಗಳಿಗೆ ಬೇಡಿಕೆ ಇದೆ.

ಪಶು ತಳಿ ಅಭಿವೃದ್ಧಿಯ ನೀತಿಗಳು ಮತ್ತು ಯೋಜನೆಗಳನ್ನು ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲೂ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ. ದೇಶೀ ತಳಿಗಳ ಅಭಿವೃದ್ಧಿ, ಅವುಗಳಲ್ಲಿನ ಹಾಲು ಉತ್ಪಾದನೆ ಕ್ಷಮತೆ ಹೆಚ್ಚಿಸುವಿಕೆ, ಕೃಷಿಕಾರ್ಯಗಳಲ್ಲಿ ಹಾಗೂ ಸಾಗಾಣಿಕೆ ವ್ಯವಸ್ಥೆಯಲ್ಲಿ ಕ್ಷಮತೆ ಹೆಚ್ಚಿಸುವಿಕೆ, ಇವುಗಳ ಬಗ್ಗೆ ಒತ್ತು ಕೊಡಲಾಗಿದೆ.

## 9. ಮೌಲ್ಯಮಾಪನಾ ವಿಧಾನ

ಕರ್ನಾಟಕ ಸರಕಾರವು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾದ ಮೂಲಕ ಈ ಯೋಜನೆಯ ಪರಿಣಾಮದ ಬಗ್ಗೆ ಮೌಲ್ಯಮಾಪನ ಮಾಡಲು ತೀರ್ಮಾನಿಸಿದಂತೆ, ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರವು, ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರನ್ನು ಈ ಕಾರ್ಯಕ್ಕಾಗಿ ಬಾಹ್ಯ ಸಂಸ್ಥೆಯಾಗಿ ಆಯ್ಕೆ ಮಾಡಿದೆ.

ಕೃಷಿ ತಂತ್ರಜ್ಞರ ಸಂಸ್ಥೆಯು ತಾನು ಸಲ್ಲಿಸಿದ್ದ ಉದ್ದೇಶಿತ ಕಾರ್ಯಸೂಚಿಯನ್ನು ಕನಾಟಕ ಮೌಲ್ಯಮಾಪನಾ ಪ್ರಾಧಿಕಾರವು ಅನುಮೋದಿಸಿದ ನಂತರ, ಮೌಲ್ಯಮಾಪನಾ ತಂಡಗಳನ್ನು ರಚಿಸಿ, ಬೆಂಗಳೂರು ವಿಭಾಗದ ಶಿವಮೊಗ್ಗ ಜಿಲ್ಲೆ, ಮೈಸೂರು ವಿಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು, ಬೆಳಗಾವಿ ವಿಭಾಗದ ಉತ್ತರಕನ್ನಡ ಜಿಲ್ಲೆ ಹಾಗೂ ಕಲಬುರಗಿ ವಿಭಾಗದ ರಾಯಚೂರು ಜಿಲ್ಲೆಗಳಿಗೆ ಸೇರಿದ ಸ್ವಯಂ ಸೇವಾಸಂಸ್ಥೆ/ ಟ್ರಸ್ಟ್‌ಗಳು ಅಧ್ಯಯನಕ್ಕೆ ಆಯ್ಕೆಯಾಗಿರುವುದರಿಂದ ಈ ಜಿಲ್ಲೆಗಳನ್ನೂ ಭೇಟಿ ಮಾಡಲು ಕಾರ್ಯಪ್ರವೃತ್ತವಾಯಿತು.

ಮೌಲ್ಯ ಮಾಪನಕ್ಕಾಗಿ, ಸ್ವಯಂಸೇವಾ ಸಂಸ್ಥೆಗಳನ್ನು ದೀರ್ಘ ಚರ್ಚೆಯ ನಂತರ ನಮ್ಮ ಸಂಸ್ಥೆಯ ಸಹಮತಿಯೊಂದಿಗೆ ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರವು ಪರ್ಪಸೀವ್ ಸ್ಯಾಂಪ್ಲಿಂಗ್ ವಿಧಾನದಿಂದ ಎಲ್ಲಾ ಐದು ದೇಶೀ ತಳಿಗಳೂ ಸಿಗುವಂತೆ ಆಯ್ಕೆ ಮಾಡಿರುತ್ತದೆ.

ಅವುಕೆಳಕಂಡಂತಿವೆ

| | |
|---|---|
| 1) ಬೆಂಗಳೂರು ವಿಭಾಗ | – (1)ಅಮೃತಧಾರಾ ಗೋಶಾಲೆ, ರಾಮಚಂದ್ರಪುರ ಮಠ, ಹನಿಯ ಅಂಚೆ, ಹೊಸನಗರ, ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |
| 2) ಮೈಸೂರು ವಿಭಾಗ | – (2)ಶ್ರೀ ಕ್ಷೇತ್ರ ಧರ್ಮಸ್ಥಳ ಗೋಸಂವರ್ಧನಾ ಕೇಂದ್ರ ಹಳ್ಳಿಂಗೇರಿ, ಕೊಕ್ಕಡ ಬೆಳ್ತಂಗಡಿ ತಾಲ್ಲೂಕು, ದ.ಕ. ಜಿಲ್ಲೆ. ಮತ್ತು (3)ಅಮೃತಧಾರಾ ಗೋಶಾಲೆ, ಗೋಳಿಗುಂಡಿ, ಶಿರೂರು ಉಡುಪಿ ಜಿಲ್ಲೆ |
| 3) ಬೆಳಗಾವಿ ವಿಭಾಗ | – (4)ಅಮೃತಧಾರಾ ಗೋಶಾಲೆ ಹೊಸಾಡ, ಮರೂರು ಕುಮಟ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆ. |
| 4) ಕಲಬುರಗಿ ವಿಭಾಗ | – (5)ಎಸ್.ಜಿ. ಎಸ್.ಬಿ ವಿ ಟಿ. ಗೋಶಾಲೆ ಚಿಕ್ಕಸೂಗೂರು, ರಾಯಚೂರು ತಾಲ್ಲೂಕು ರಾಯಚೂರು ಜಿಲ್ಲೆ. |

ಮೂವರು ಸದಸ್ಯರುಗಳನ್ನೊಳಗೊಂಡ ತಂಡಗಳನ್ನು ರಚಿಸಿ ಅವರಿಗೆ ಮೌಲ್ಯಮಾಪನಾ ವಿಷಯಗಳ ಬಗ್ಗೆ ತರಬೇತಿ ನೀಡಲಾಯಿತು.

ಅಗತ್ಯ ಮಾಹಿತಿಗಳನ್ನು ಸಂಗ್ರಹಿಸುವ ಸಲುವಾಗಿ ಐದು ನಮೂನೆಗಳನ್ನು ರೂಪಿಸಲಾಯಿತು. ಅವುಗಳ ಮೂಲಕ ಕೆಳಕಂಡವರಿಂದ ಮಾಹಿತಿ ಪಡೆಯಲು ಉದ್ದೇಶಿಸಲಾಯಿತು.

1. ಪಶು ಸಂಗೋಪನಾ, ಆಯುಕ್ತಾಲಯ, ಬೆಂಗಳೂರು
2. ಸಂಬಂಧಿಸಿದ ಜಿಲ್ಲೆಗಳ, ಪಶುಪಾಲನಾ ಮತ್ತು ಪಶುವೈದ್ಯಕೀಯ ಉಪನಿರ್ದೇಶಕರು.
3. ಸಹಾಯಕ ನಿರ್ದೇಶಕರು / ಪಶುವೈದ್ಯ ಅಧಿಕಾರಿ – ಸ್ವಯಂ ಸೇವಾ ಸಂಸ್ಥೆಗಳ ಕಾರ್ಯ ನಿರ್ವಹಣಾ ಪ್ರದೇಶದ ವ್ಯಾಪ್ತಿಯುಳ್ಳುವರು.
4. ಆಯ್ಕೆ ಮಾಡಲಾದ ಸ್ವಯಂಸೇವಾಸಂಸ್ಥೆಗಳು. ಮತ್ತು
5. ಈ ಯೋಜನೆಯಡಿಯಲ್ಲಿ ಸವಲತ್ತು ಪಡೆದ ರೈತರಿಂದ.

ತಂಡಗಳು ತದನಂತರ ಸಂಬಂಧಿಸಿದ ಜಿಲ್ಲೆಗಳಿಗೆ ಭೇಟಿನೀಡಿ ಸಮುಚಿತ ಮಾಹಿತಿಗಳನ್ನು ಮೌಲ್ಯಮಾಪನಾ ಉದ್ದೇಶಕ್ಕಾಗಿ ಪಡೆದವು.

## 10.ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣಾ ವಿಧಾನ

ಮೊದಲೇ ನಿಗದಿಪಡಿಸಲಾದ ನಮೂನೆಗಳಲ್ಲಿ ಕೆಳಕಂಡವರಿಂದ ಅಗತ್ಯ ಮಾಹಿತಿಗಳನ್ನು ತಂಡಗಳು ಕಲೆ ಹಾಕಿದವು.

ಆ ನಮೂನೆಗಳು

ನಮೂನೆ 1: ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಆಯುಕ್ತಾಲಯದಿಂದ

ನಮೂನೆ 2: ಸಂಬಂಧಪಟ್ಟ ಜಿಲ್ಲೆಯ, ಉಪನಿರ್ದೇಶಕರುಗಳಿಂದ

ನಮೂನೆ 3: ಸ್ವಯಂಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಪ್ರದೇಶದ ವ್ಯಾಪ್ತಿಯುಳ್ಳ ತಾಲ್ಲೂಕು ಹಾಗೂ ಪ್ರದೇಶದ ಸಹಾಯಕ ನಿರ್ದೇಶಕರು/ ಪಶುವೈದ್ಯಾಧಿಕಾರಿಗಳಿಂದ.

ನಮೂನೆ 4: ಆಯ್ಕೆ ಮಾಡಲ್ಪಟ್ಟ ಸ್ವಯಂಸೇವಾ ಸಂಸ್ಥೆಗಳಿಂದ

ನಮೂನೆ 5: ಯೋಜನೆಯಡಿಯಲ್ಲಿ ಸವಲತ್ತು ಪಡೆದ ಫಲಾನುಭವಿ ರೈತರುಗಳಿದ್ದಲ್ಲಿ, ಅವರಿಂದ

ಅಗತ್ಯ ಮಾಹಿತಿಗಳನ್ನು ಮೇಲ್ಕಂಡವರಿಂದ ಪಡೆಯಲಾಯ್ತು ಮತ್ತು ಅವುಗಳ ಪ್ರತಿಗಳನ್ನು, ಲಗತ್ತಿಸಲಾಗಿದೆ.

ಮೂವರು ಸದಸ್ಯರನ್ನೊಳಗೊಂಡ (ಕೋರ್ ಕಮಿಟಿ) ಸಮಿತಿಯು, ಮಾಹಿತಿಗಳನ್ನು ಮಾಲ್ಯಮಾಪನೆ ಮಾಡಿತು.

## 11.ಫಲಾನುಭವಿವಾರು ಸಂಶೋಧನೆಗಳು

### ಅ) ಅಮೃತಧಾರಾ ಗೋಶಾಲೆ, ರಾಮಚಂದ್ರಾಪುರ ಮಠ, ಹೊಸನಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

| | | |
|---|---|---|
| 1 | ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯು ಯೋಜನೆಯನ್ವಯ ಸವಲತ್ತು ಪಡೆದಿರುವುದೇ ? | ಹೌದು |
| 2 | ಕೊಡಲ್ಪಟ್ಟ ಅನುದಾನವನ್ನು, ನಿರ್ದಿಷ್ಟ ಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ ? | ಹೌದು |
| 3 | ತಳಿಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? | ಸ್ಥಾಪಿಸಲಾಗಿದೆ |
| 4 | ಕೊಡಲ್ಪಟ್ಟ ಅನುದಾನ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಕಾಗುವಷ್ಟಿದೆಯೇ? | ಹೌದು |
| 5 | ಸ್ವಯಂಸೇವಾ ಸಂಸ್ಥೆಯ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆಯೇ? | ಇಲ್ಲ<br>ಮೇಲ್ವಿಚಾರಣೆ ಮಾಡುತ್ತಿರುವ ವ್ಯಕ್ತಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ಇರುವುದಿಲ್ಲ. |
| 6 | ಅನುದಾನವನ್ನು ಸೂಕ್ತ ಸಮಯಕ್ಕೆ ಕಾರ್ಯಕ್ರಮಕ್ಕಾಗಿ ಉಪಯೋಗಿಸಲು ಬಿಡುಗಡೆ ಮಾಡಲಾಗಿದೆಯೇ ? | ಹೌದು |
| 7 | ಯೋಜನೆಯನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ಮತ್ತು ಜಿಲ್ಲೆಯ ಇಲಾಖಾ ಅಧಿಕಾರಿಗಳು, ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? | ಇಲ್ಲ |
| 8 | ಸ್ವಯಂ ಸೇವಾ ಸಂಸ್ಥೆಯು, ಮಾಸಿಕ, ತ್ರೈಮಾಸಿಕ ಇತ್ಯಾದಿ ವರದಿಗಳನ್ನು ಇಲಾಖೆಯ ಜಿಲ್ಲಾ ಅಧಿಕಾರಿಗೆ, ನಿಗದಿತವಾಗಿ ಸಲ್ಲಿಸುತ್ತಿದೆಯೇ? | ಇಲ್ಲ |
| 9 | ಸ್ವಯಂಸೇವಾ ಸಂಸ್ಥೆಯು ಪಡೆದ ಅನುದಾನಕ್ಕೆ ಸದ್ವಿನಿಯೋಗ ಧೃಢೀಕರಣ ಪತ್ರ ನೀಡಿದೆಯೇ? | ಹೌದು |
| 10 | ಯೋಜನೆಯು ಸ್ಥಳೀಯ ತಳಿಗಳ, ಅಭಿವೃದ್ಧಿ ಹಾಗೂ ಸಂರಕ್ಷಣೆ ಕಾರ್ಯದ ಉದ್ದೇಶಿತ ಅಭಿವೃದ್ಧಿ ತಂದಿದೆಯೇ? | ಇಲ್ಲ |
| 11 | ಯೋಜನೆಯ ಮುಂದುವರಿಕೆ ಅಗತ್ಯವಿದೆಯೇ? | ಇಲ್ಲ |

ಒಟ್ಟು ಸಾರಾಂಶ :–

ಈ ಗೋಶಾಲೆಗೆ 19.17 ಎಕರೆಯಷ್ಟು ಜಮೀನಿರುತ್ತದೆ. ಈ ಗೋಶಾಲೆಯು, ರಾಮಚಂದ್ರಾಪುರ ಮಠದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ 402 ದನಗಳಿವೆಯೆಂದು ಸಂಸ್ಥೆಯು ತಿಳಿಸಿದೆ. ಆದರೆ ವಾಸ್ತವಿಕವಾಗಿ 120 ರಿಂದ 130 ದನಗಳಿರುವುದು ಕಂಡು ಬಂತು. ಅವುಗಳಲ್ಲಿ 30 ಸ್ಥಳೀಯ ತಳಿಗಳು, ಕೆಲವು ಮಾನ್ಯತೆಯುಳ್ಳ ಮತ್ತು ಕೆಲವು ಮಾನ್ಯತೆಯಿಲ್ಲದ ತಳಿಗಳಾಗಿವೆ. ಗಂಡು– ಹೆಣ್ಣುಗಳ ಅನುಪಾತ ಸುಮಾರು 50:50 ರಷ್ಟಿದೆ.

ಉದ್ದೇಶಿತ ತಳಿವೃದ್ಧಿ ಕಾರ್ಯವನ್ನು ಕೈ ಗೊಂಡಿರುವುದಿಲ್ಲ ಕೃತಕ ಗರ್ಭಧಾರಣೆಯನ್ನು ಅನುಷ್ಠಾನಗೊಳಿಸುತ್ತಿಲ್ಲ. ಇದು ಅವರ ಧಾರ್ಮಿಕ ನೀತಿಗೆ ವಿರುದ್ಧ ಎಂದು ಹೇಳಲಾಯ್ತು.

2006–07 ನೇ ಸಾಲಿನಲ್ಲಿ ರೂ 10.00 ಲಕ್ಷದ ಅನುದಾನವನ್ನು ಪಡೆದಿದ್ದು ದನದ ಕೊಟ್ಟಿಗೆಗಳು, ಕೊಳವೆಬಾವಿಗಳು, ಮುಂತಾದವನ್ನು ನಿರ್ಮಿಸಲಾಗಿದೆ.

ಈ ಗೋಶಾಲೆ ತಳಿವರ್ಧನಾ ಕೇಂದ್ರವಾಗುವ ಬದಲು, ತಳಿಗಳ ಪ್ರಾತ್ಯಕ್ಷಿಕಾ ಕೇಂದ್ರವಾಗಿ ಅಸ್ತಿತ್ವದಲ್ಲಿದೆ.

ಕೆಲ ದಾಖಲೆಗಳನ್ನು ಇಡಲಾಗಿದೆಯಾದರೂ, ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟಿರುವುದಿಲ್ಲ. ಕೇಂದ್ರಕ್ಕೆ ಯಾವುದೇ ಗುರಿಗಳನ್ನೂ ನಿಗದಿಪಡಿಸಿಲ್ಲ ಮತ್ತು ಯಾವುದೇ ಅಧಿಕಾರಿ ನಿರ್ದಿಷ್ಟ ಸಮಯಗಳಲ್ಲಿ ಪರಿಶೀಲನಾ ಸಭೆಯನ್ನು ನಡೆಸಿಲ್ಲ. ಮೇವಿನ ತಾಕುಗಳನ್ನು ಸುಧಾರಿತ ಮೇವಿನ ತಳಿಗಳಿಂದ ಅಭಿವೃದ್ಧಿಪಡಿಸಲಾಗಿದೆ.

ಈ ಸಂಸ್ಥೆಯು ಗೋಮೂತ್ರ ಹಾಗೂ ಸೆಗಣಿಯನ್ನು ಉಪಯೋಗಿಸಿ ಔಷಧೀಯ ಉತ್ಪನ್ನಗಳನ್ನು ತಯಾರಿಸುತ್ತಿದೆ.

**ಆ) ಶ್ರೀ ಕ್ಷೇತ್ರ ಧರ್ಮಸ್ಥಳ ಗೋಸಂವರ್ಧನಾ ಕೇಂದ್ರ, ಕೊಕ್ಕಡ, ಬೆಳ್ತಂಗಡಿ ತಾಲ್ಲೂಕು ದ.ಕ.ಜಿಲ್ಲೆ.**

(ಗ್ರಾಮಾಭಿವೃದ್ಧಿ ಯೋಜನೆಯ ಒಂದು ಘಟಕ)

| | | |
|---|---|---|
| 1 | ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯು ಯೋಜನೆಯನ್ವಯ ಸವಲತ್ತು ಪಡೆದಿರುವುದೇ ? | ಹೌದು |
| 2 | ಕೊಡಲ್ಪಟ್ಟ ಅನುದಾನವನ್ನು, ನಿರ್ದಿಷ್ಟ ಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ ? | ಹೌದು |
| 3 | ತಳಿಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? | ಸ್ಥಾಪಿಸಲಾಗಿದೆ |
| 4 | ಕೊಡಲ್ಪಟ್ಟ ಅನುದಾನ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಕಾಗುವಷ್ಟಿದೆಯೇ? | ಸಾಕಾಗುತ್ತಿಲ್ಲ<br>ಕೇವಲ ರೂ.3.3ಲಕ್ಷಗಳನ್ನು ಮಂಜೂರು ಮಾಡಲಾಗಿದೆ. |
| 5 | ಸ್ವಯಂಸೇವಾ ಸಂಸ್ಥೆಯ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆಯೇ? | ಇಲ್ಲ<br>ಮೇಲ್ವಿಚಾರಣೆ ಮಾಡುತ್ತಿರುವ ವ್ಯಕ್ತಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ಇರುವುದಿಲ್ಲ. |
| 6 | ಅನುದಾನವನ್ನು ಸೂಕ್ತ ಸಮಯಕ್ಕೆ ಕಾರ್ಯಕ್ರಮಕ್ಕಾಗಿ ಉಪಯೋಗಿಸಲು ಬಿಡುಗಡೆ ಮಾಡಲಾಗಿದೆಯೇ ? | ಹೌದು |
| 7 | ಯೋಜನೆಯನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ಮತ್ತು ಜಿಲ್ಲೆಯ ಇಲಾಖಾ ಅಧಿಕಾರಿಗಳು, ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? | ಇಲ್ಲ |
| 8 | ಸ್ವಯಂ ಸೇವಾ ಸಂಸ್ಥೆಯು, ಮಾಸಿಕ, ತ್ರೈಮಾಸಿಕ ಇತ್ಯಾದಿ ವರದಿಗಳನ್ನು ಇಲಾಖೆಯ ಜಿಲ್ಲಾ ಅಧಿಕಾರಿಗೆ, ನಿಗದಿತವಾಗಿ ಸಲ್ಲಿಸುತ್ತಿದೆಯೇ? | ಇಲ್ಲ |
| 9 | ಸ್ವಯಂಸೇವಾ ಸಂಸ್ಥೆಯು ಪಡೆದ ಅನುದಾನಕ್ಕೆ ಸದ್ವಿನಿಯೋಗ ಧೃಢೀಕರಣ ಪತ್ರ ನೀಡಿದೆಯೇ? | ಇಲ್ಲ |
| 10 | ಯೋಜನೆಯು ಸ್ಥಳೀಯ ತಳಿಗಳ, ಅಭಿವೃದ್ಧಿ ಹಾಗೂ ಸಂರಕ್ಷಣೆ ಕಾರ್ಯದ ಉದ್ದೇಶಿತ ಅಭಿವೃದ್ಧಿ ತಂದಿದೆಯೇ? | ಇಲ್ಲ |
| 11 | ಯೋಜನೆಯ ಮುಂದುವರಿಕೆ ಅಗತ್ಯವಿದೆಯೇ? | ಇಲ್ಲ |

ಒಟ್ಟು ಸಾರಾಂಶ :

ಈ ಸಂಸ್ಥೆಗೆ 8.00 ಎಕರೆ ಮಾತ್ರ ಜಮೀನಿದ್ದುಇದು ನಿಗದಿಪಡಿಸಲ್ಪಟ್ಟ ಪ್ರದೇಶಕ್ಕಿಂತಲೂ 2.00 ಎಕರೆ ಕಡಿಮೆ ಇರುತ್ತದೆ.

ಇಲ್ಲಿ ಒಟ್ಟು 89 ದನಗಳನ್ನು ಇಡಲಾಗಿದೆ, ಅವುಗಳಲ್ಲಿ 5 ಸ್ಥಳೀಯತಳಿಗಳಿರುತ್ತವೆ ಮತ್ತು ಕೆಲ ಮಿಶ್ರತಳಿ ದನಗಳೂ ಇವೆ.

ಹಳ್ಳಿಕಾರ್, ರೆಡ್‌ಸಿಂಧಿ, ಕಾಂಕ್ರೆಜ್, ಗೀರ್, ಮಲೆನಾಡು ಗಿಡ್ಡ ತಳಿಗಳಿವೆ. ಅವುಗಳಲ್ಲಿ ಎಂದರೆ ಒಟ್ಟು ದನಗಳ ಸಂಖ್ಯೆಯಲ್ಲಿ 46 ಮಲೆನಾಡು ಗಿಡ್ಡ ಜಾತಿಯವು ಮತ್ತು ಅವುಗಳ ಪೈಕಿ 11 ಗಂಡುಗಳಿವೆ.

ಗಂಡು ಮತ್ತು ಹೆಣ್ಣು ದನಗಳನ್ನು ಒಟ್ಟಾಗಿಯೇ ಮೇಯಲು ಬಿಡಲಾಗುತ್ತಿದೆ.

ಕೃತಕ ಗರ್ಭಧಾರಣೆಯನ್ನು ಅನುಸರಿಸುತ್ತಿಲ್ಲ.

2008–09ನೇ ಸಾಲಿನಲ್ಲಿ ರೂ.3.33 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಅದನ್ನು 3 ಕೊಟ್ಟಿಗೆಳನ್ನು ಕಟ್ಟಲು ಉಪಯೋಗಿಸಿಕೊಳ್ಳಲಾಗಿದೆ.

ಪ್ರಾರಂಭದಲ್ಲಿ 175 ದನಗಳಿದ್ದವೆಂದು ಪಶುಪಾಲನಾ ಇಲಾಖೆ ತಿಳಿಸಿದೆ ಮತ್ತು ಸಂಸ್ಥೆಯು ಅದನ್ನು 40 ದನಗಳೆಂದು ತಿಳಿಸಿದೆ. ಸಂಖ್ಯೆಯು ಮೂಲದಲ್ಲಿದ್ದ 40ರಿಂದ ಸುಮಾರು 50ರಷ್ಟು ಸಂಖ್ಯೆಯಿಂದ ವೃದ್ಧಿಸಿರುವುದು ಕಂಡುಬಂದಿದೆ. ಆದರೆ, ಯಾವುದೇ ಸಮುಚಿತ ದಾಖಲೆಗಳನ್ನಿಟ್ಟಿಲ್ಲದಿರುವುದರಿಂದ ಹೆಚ್ಚುವಿಕೆ ತಳಿ ಅಭಿವದ್ಧಿ ಕ್ರಿಯೆಯಿಂದ ಆಗಿದೆಯೇ ಎಂದು ತಿಳಿಯುವುದು ಕಷ್ಟಕರವಾಗಿದೆ.

ಇ) ನಂದಗೋಕುಲ ಚಾರಿಟೆಬಲ್ ಟ್ರಸ್ಟ್–ಅಮೃತಧಾರ ಗೋಶಾಲೆ, ಗೋಳಿಗುಂಡಿ, ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ.

| | | |
|---|---|---|
| 1 | ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯು ಯೋಜನೆಯನ್ವಯ ಸವಲತ್ತು ಪಡೆದಿರುವುದೇ ? | ಹೌದು |
| 2 | ಕೊಡಲ್ಪಟ್ಟ ಅನುದಾನವನ್ನು, ನಿರ್ದಿಷ್ಟ ಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ ? | ಹೌದು |
| 3 | ತಳಿಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? | ಸ್ಥಾಪಿಸಲಾಗಿದೆ |
| 4 | ಕೊಡಲ್ಪಟ್ಟ ಅನುದಾನ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಕಾಗುವಷ್ಟಿದೆಯೇ? | ಹೌದು |
| 5 | ಸ್ವಯಂಸೇವಾ ಸಂಸ್ಥೆಯ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆಯೇ? | ಇಲ್ಲ<br>ಮೇಲ್ವಿಚಾರಣೆ ಮಾಡುತ್ತಿರುವ ವ್ಯಕ್ತಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ಇರುವುದಿಲ್ಲ. |
| 6 | ಅನುದಾನವನ್ನು ಸೂಕ್ತ ಸಮಯಕ್ಕೆ ಕಾರ್ಯಕ್ರಮಕ್ಕಾಗಿ ಉಪಯೋಗಿಸಲು ಬಿಡುಗಡೆ ಮಾಡಲಾಗಿದೆಯೇ ? | ಹೌದು |
| 7 | ಯೋಜನೆಯನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ಮತ್ತು ಜಿಲ್ಲೆಯ ಇಲಾಖಾ ಅಧಿಕಾರಿಗಳು, ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? | ಇಲ್ಲ |
| 8 | ಸ್ವಯಂ ಸೇವಾ ಸಂಸ್ಥೆಯು, ಮಾಸಿಕ, ತ್ರೈಮಾಸಿಕ ಇತ್ಯಾದಿ ವರದಿಗಳನ್ನು ಇಲಾಖೆಯ ಜಿಲ್ಲಾ ಅಧಿಕಾರಿಗೆ, ನಿಗದಿತವಾಗಿ ಸಲ್ಲಿಸುತ್ತಿದೆಯೇ? | ಇಲ್ಲ |
| 9 | ಸ್ವಯಂಸೇವಾ ಸಂಸ್ಥೆಯು ಪಡೆದ ಅನುದಾನಕ್ಕೆ ಸದ್ವಿನಿಯೋಗ ಧೃಢೀಕರಣ ಪತ್ರ ನೀಡಿದೆಯೇ? | ಇಲ್ಲ |
| 10 | ಯೋಜನೆಯು ಸ್ಥಳೀಯ ತಳಿಗಳ, ಅಭಿವೃದ್ಧಿ ಹಾಗೂ ಸಂರಕ್ಷಣೆ ಕಾರ್ಯದ ಉದ್ದೇಶಿತ ಅಭಿವೃದ್ಧಿ ತಂದಿದೆಯೇ? | ಇಲ್ಲ |
| 11 | ಯೋಜನೆಯ ಮುಂದುವರಿಕೆ ಅಗತ್ಯವಿದೆಯೇ? | ಇಲ್ಲ |

ಒಟ್ಟು ಸಾರಾಂಶ :

ಈ ಟ್ರಸ್ಟ್‌ಗೆ ಕೇವಲ 0.58 ಎಕರೆ ಮಾತ್ರ ಜಮೀನಿರುತ್ತದೆ. ಇದು ಸರ್ಕಾರೀ ಆದೇಶದಲ್ಲಿ ನಿಗದಿಪಡಿಸಿದ ಪ್ರದೇಶಕ್ಕಿಂತ ಬಹಳ ಕಡಿಮೆ ಇರುತ್ತದೆ.

ಸದರಿ ಟ್ರಸ್ಟ್‌ನಲ್ಲಿ ಕೇವಲ ಇಬ್ಬರೇ ಟ್ರಸ್ಟಿಗಳಿರುವ ಸಂಸ್ಥೆಯಾಗಿದೆ.

2008–09ನೇ ಸಾಲಿನಲ್ಲಿ ರೂ.10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಅದನ್ನು ಕೊಟ್ಟಿಗೆ ಕಟ್ಟಲು ಮತ್ತು ಕೊಳವೆಬಾವಿ ಹಾಗೂ ಒಂದು ತೆರೆದ ಬಾವಿಯನ್ನು ತೆಗೆಸಲು ಉಪಯೋಗಿಸಲಾಗಿದೆ.

ಪ್ರಾರಂಭದಲ್ಲಿದ್ದ ದನಗಳ ಸಂಖ್ಯೆ ಟ್ರಸ್ಟ್ ತಿಳಿಸಿರುವಂತೆ ಕೇವಲ 20 ಆದರೆ ಪಶುಸಂಗೋಪನಾ ಇಲಾಖೆ ತಿಳಿಸಿದಂತೆ 54.

ಈಗ ಸಂಸ್ಥೆಯಲ್ಲಿ 67 ದನಗಳಿದ್ದು 12 ಗಂಡು ಕರುಗಳೂ ಸೇರಿದಂತೆ ಮಲೆನಾಡುಗಿಡ್ಡ ತಳಿಯ 27 ದನಗಳಿವೆ. ಸಂಸ್ಥೆಯಲ್ಲಿ 13 ಹೆಣ್ಣುಗಳಿಗೆ, 2 ಹೋರಿಗಳೂ, ಎರಡು ಹೋರಿಗರುಗಳಿವೆ. ಕೆಲ ಎಮ್ಮೆಗಳಿರುವುದು ಕಂಡುಬಂತು

ಸಂಸ್ಥೆಯು ಕೃತಕ ಗರ್ಭಧಾರಣೆ ವಿರೋಧಿ ನೀತಿ ಹೊಂದಿದೆ ಎಂದು ತಿಳಿಸಿದೆ. ಆವರಣದಲ್ಲಿ ಒಂದು ಗೋಬರ್ ಅನಿಲ ಸ್ಥಾವರನ್ನು ಸ್ಥಾಪಿಸಿದ್ದು, ಸಗಣಿಯ ಬಗ್ಗಡವನ್ನು, ಸಾವಯವ ಗೊಬ್ಬರದಂತೆ ಉಪಯೋಗಿಸಲಾಗುತ್ತಿದೆ.

**ಈ) ಅಮೃತಧಾರಾ, ಗೋಶಾಲೆ, ಹೊಸಾಡ, ಕುಮಟ ತಾಲ್ಲೂಕು ಉತ್ತರ ಕನ್ನಡ ಜಿಲ್ಲೆ,**

| | | |
|---|---|---|
| 1 | ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯು ಯೋಜನೆಯನ್ವಯ ಸವಲತ್ತು ಪಡೆದಿರುವುದೇ ? | ಹೌದು |
| 2 | ಕೊಡಲ್ಪಟ್ಟ ಅನುದಾನವನ್ನು, ನಿರ್ದಿಷ್ಟ ಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ ? | ಹೌದು |
| 3 | ತಳಿಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? | ಸ್ಥಾಪಿಸಲಾಗಿದೆ |
| 4 | ಕೊಡಲ್ಪಟ್ಟ ಅನುದಾನ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಕಾಗುವಷ್ಟಿದೆಯೇ? | ಸಾಕಾಗುತ್ತಿಲ್ಲ |
| 5 | ಸ್ವಯಂಸೇವಾ ಸಂಸ್ಥೆಯ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆಯೇ? | ಇಲ್ಲ<br>ಮೇಲ್ವಿಚಾರಣೆ ಮಾಡುತ್ತಿರುವ ವ್ಯಕ್ತಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ಇರುವುದಿಲ್ಲ. |
| 6 | ಅನುದಾನವನ್ನು ಸೂಕ್ತ ಸಮಯಕ್ಕೆ ಕಾರ್ಯಕ್ರಮಕ್ಕಾಗಿ ಉಪಯೋಗಿಸಲು ಬಿಡುಗಡೆ ಮಾಡಲಾಗಿದೆಯೇ ? | ಹೌದು |
| 7 | ಯೋಜನೆಯನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ಮತ್ತು ಜಿಲ್ಲೆಯ ಇಲಾಖಾ ಅಧಿಕಾರಿಗಳು, ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? | ಇಲ್ಲ |
| 8 | ಸ್ವಯಂ ಸೇವಾ ಸಂಸ್ಥೆಯು, ಮಾಸಿಕ, ತ್ರೈಮಾಸಿಕ ಇತ್ಯಾದಿ ವರದಿಗಳನ್ನು ಇಲಾಖೆಯ ಜಿಲ್ಲಾ ಅಧಿಕಾರಿಗೆ, ನಿಗದಿತವಾಗಿ ಸಲ್ಲಿಸುತ್ತಿದೆಯೇ? | ಇಲ್ಲ |
| 9 | ಸ್ವಯಂಸೇವಾ ಸಂಸ್ಥೆಯು ಪಡೆದ ಅನುದಾನಕ್ಕೆ ಸದ್ವಿನಿಯೋಗ ಧೃಢೀಕರಣ ಪತ್ರ ನೀಡಿದೆಯೇ? | ಇಲ್ಲ |
| 10 | ಯೋಜನೆಯು ಸ್ಥಳೀಯ ತಳಿಗಳ, ಅಭಿವೃದ್ಧಿ ಹಾಗೂ ಸಂರಕ್ಷಣೆ ಕಾರ್ಯದ ಉದ್ದೇಶಿತ ಅಭಿವೃದ್ಧಿ ತಂದಿದೆಯೇ? | ಇಲ್ಲ |
| 11 | ಯೋಜನೆಯ ಮುಂದುವರಿಕೆ ಅಗತ್ಯವಿದೆಯೇ? | ಇಲ್ಲ |

ಒಟ್ಟು ಸಾರಾಂಶ :

ಈ ಟ್ರಸ್ಟ್‌ಗೆ 8.28 ಎಕರೆ ಜಮೀನಿರುತ್ತದೆ. ಈ ಗೋಶಾಲೆಯನ್ನು ಧರ್ಮಚಕ್ರ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟ್ ನಡೆಸುತ್ತಿದೆ ಮತ್ತು ಟ್ರಸ್ಟನ್ನು ಶ್ರೀರಾಮಚಂದ್ರಾಪುರಮಠ, ಶಿವಮೊಗ್ಗ ಜಿಲ್ಲೆ ಇದರ ಶ್ರೀ.ರಾಘವೇಶ್ವರ ಭಾರತಿ ಸ್ವಾಮೀಜಿ ಎಂಬ ಒಬ್ಬರೇ ಟ್ರಸ್ಟಿ ನಡೆಸುತ್ತಿದ್ದಾರೆ.

ಪ್ರಾರಂಭದಲ್ಲಿ ಟ್ರಸ್ಟ್ ತಿಳಿಸಿದಂತೆ ಮಲೆನಾಡು ಗಿಡ್ಡ, ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳ 120 ದನಗಳಿದ್ದವು.

2006–07ನೇ ಸಾಲಿನಲ್ಲಿ ರೂ.5.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ.

ಪ್ರಸ್ತುತ ಟ್ರಸ್ಟ್ ತಿಳಿಸಿದಂತೆ 196 ದನಗಳಿದ್ದಾವೆಂದು ತಿಳಿಸಿದ್ದು ವಾಸ್ತವವಾಗಿ 90–100 ದನಗಳಿರುವುದು ಕಂಡು ಬಂತು. ಆ ಬಗ್ಗೆ ಮೇಲ್ವಿಚಾರಕರನ್ನು ಕೇಳಲಾಗಿ ಪ್ರವಾಹದಿಂದಾಗಿ ಹೆಚ್ಚು ರಾಸುಗಳು ಕಳೆದುಹೋದುವೆಂದು ತಿಳಿಸಿದರು. ಈ ನಷ್ಟದ ಬಗ್ಗೆ ತಿಳಿಯಲು ಯಾವುದೇ ಸಮುಚಿತ ದಾಖಲೆಗಳಿಲ್ಲ.

ಈ ಕ್ಷೇತ್ರದಲ್ಲಿರುವ ದನಗಳ ಸಂಖ್ಯೆಯು ಬಹುಮಟ್ಟಿಗೆ ಮಲೆನಾಡು ಗಿಡ್ಡಗಳೇ ಆಗಿವೆ.

ಕ್ಷೇತ್ರದಲ್ಲಿ ಕೊಡಲ್ಪಟ್ಟ ಅನುದಾನದ ಹಣದಿಂದ ಕೊಳವೆ ಬಾವಿ ಕೊರೆಸಲಾಗಿದೆ. ಮೇವಿನ ತಾಕುಗಳನ್ನು ಅಭಿವೃದ್ಧಿಪಡಿಸಲಾಗಿದೆ ಅಲ್ಲದೇ ಕೊಟ್ಟಿಗೆಗಳನ್ನು ಕಟ್ಟಲಾಗಿದೆ.

ಉ) ಶ್ರೀ ಎಸ್. ಜಿ.ಎಸ್. ಬಿ ವಿ ಟ್ರಸ್ಟ್, ಚಿಕ್ಕ ಸೂಗೂರ, ರಾಯಚೂರು ತಾಲ್ಲುಕು ಮತ್ತು ಜಿಲ್ಲೆ.

| | | |
|---|---|---|
| 1 | ಆಯ್ಕೆ ಮಾಡಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯು ಯೋಜನೆಯನ್ವಯ ಸವಲತ್ತು ಪಡೆದಿರುವುದೇ ? | ಹೌದು |
| 2 | ಕೊಡಲ್ಪಟ್ಟ ಅನುದಾನವನ್ನು, ನಿರ್ದಿಷ್ಟ ಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ ? | ಹೌದು |
| 3 | ತಳಿಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? | ಸ್ಥಾಪಿಸಲಾಗಿದೆ |
| 4 | ಕೊಡಲ್ಪಟ್ಟ ಅನುದಾನ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಕಾಗುವಷ್ಟಿದೆಯೇ? | ಹೌದು |
| 5 | ಸ್ವಯಂಸೇವಾ ಸಂಸ್ಥೆಯ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗಿದೆಯೇ? | ಇಲ್ಲ<br>ಮೇಲ್ವಿಚಾರಣೆ ಮಾಡುತ್ತಿರುವ ವ್ಯಕ್ತಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ಇರುವುದಿಲ್ಲ. |
| 6 | ಅನುದಾನವನ್ನು ಸೂಕ್ತ ಸಮಯಕ್ಕೆ ಕಾರ್ಯಕ್ರಮಕ್ಕಾಗಿ ಉಪಯೋಗಿಸಲು ಬಿಡುಗಡೆ ಮಾಡಲಾಗಿದೆಯೇ ? | ಹೌದು |
| 7 | ಯೋಜನೆಯನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ಮತ್ತು ಜಿಲ್ಲೆಯ ಇಲಾಖಾ ಅಧಿಕಾರಿಗಳು, ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? | ಇಲ್ಲ |
| 8 | ಸ್ವಯಂ ಸೇವಾ ಸಂಸ್ಥೆಯು, ಮಾಸಿಕ, ತ್ರೈಮಾಸಿಕ ಇತ್ಯಾದಿ ವರದಿಗಳನ್ನು ಇಲಾಖೆಯ ಜಿಲ್ಲಾ ಅಧಿಕಾರಿಗೆ, ನಿಗದಿತವಾಗಿ ಸಲ್ಲಿಸುತ್ತಿದೆಯೇ? | ಇಲ್ಲ |
| 9 | ಸ್ವಯಂಸೇವಾ ಸಂಸ್ಥೆಯು ಪಡೆದ ಅನುದಾನಕ್ಕೆ ಸದ್ವಿನಿಯೋಗ ಧೃಢೀಕರಣ ಪತ್ರ ನೀಡಿದೆಯೇ? | ಇಲ್ಲ |
| 10 | ಯೋಜನೆಯು ಸ್ಥಳೀಯ ತಳಿಗಳ, ಅಭಿವೃದ್ಧಿ ಹಾಗೂ ಸಂರಕ್ಷಣೆ ಕಾರ್ಯದ ಉದ್ದೇಶಿತ ಅಭಿವೃದ್ಧಿ ತಂದಿದೆಯೇ? | ಇಲ್ಲ |
| 11 | ಯೋಜನೆಯ ಮುಂದುವರಿಕೆ ಅಗತ್ಯವಿದೆಯೇ? | ಇಲ್ಲ |

ಒಟ್ಟು ಸಾರಾಂಶ :

ಈ ಸಂಸ್ಥೆಗೆ 21.74 ಎಕರೆ ಜಮೀನಿರುತ್ತದೆ. ಈ ಗೋಶಾಲೆಯನ್ನು ಮೇಲ್ಕಂಡ ಟ್ರಸ್ಟ್ ನಡೆಸುತ್ತಿದೆ.

ಪ್ರಾರಂಭದಲ್ಲಿ 149 ದನಗಳಿದ್ದುವೆಂದೂ, ಪ್ರಸ್ತುತ 163 ದನಗಳಿವೆಯೆಂದೂ, ಗೋಶಾಲೆಯ ನಿಗಾವಹಿಸುತ್ತಿರುವ ಸ್ವಾಮೀಜಿ ತಿಳಿಸಿರುತ್ತಾರೆ. ಆದರೆ ವಾಸ್ತವವಾಗಿ ಸಮೀಕ್ಷೆಯ ದಿನ ಸುಮಾರು 65 ದನಗಳಿರುವುದು ಕಂಡುಬಂತು.

ಈ ಉದ್ದೇಶಕ್ಕಾಗಿ ಕೊಡಲಾದ ಅನುದಾನದಲ್ಲಿ ಕಟ್ಟಲ್ಪಟ್ಟಿದೆಯೆಂದು ಹೇಳಲಾದ ಕೊಟ್ಟಿಗೆ ಈಗಿರುವ ದನಗಳಿಗೆ ಕೂಡಾ ಸಾಲದಾಗಿದೆ.

2006–07ನೇ ಸಾಲಿನಲ್ಲಿ ರೂ.10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮಠವು ಈ ಅನುದಾನದಿಂದ ಕೊಟ್ಟಿಗೆ ಕಟ್ಟಲಾಗಿದೆ ಮತ್ತು ಕೊಳವೆಬಾವಿ ತೆಗೆಸಲಾಗಿದೆಯೆಂದು ತಿಳಿಸಿದೆ.

ಇಲ್ಲಿ ದನಗಳನ್ನು ಮುಕ್ತ ವ್ಯವಸ್ಥೆಯಲ್ಲಿ ಹೆಣ್ಣು ಹಾಗೂ ಗಂಡುದನಗಳನ್ನು ಒಟ್ಟಿಗೆ ಸಾಕಲಾಗುತ್ತಿದೆ.

ಮೇಲ್ಕಂಡ ಸಂಸ್ಥೆಗಳಿಂದ ಪಡೆಯಲಾದ ಮಾಹಿತಿಗಳ ಪ್ರತಿಗಳನ್ನು ಈ ವರದಿಗೆ ಲಗತ್ತಿಸಲಾಗಿದೆ.

ಮೂರು ಸದಸ್ಯರನ್ನೊಳಗೊಂಡ ಕೋರ್ ಸಮಿತಿಯು, ಮಾಹಿತಿಗಳನ್ನು ವಿಶ್ಲೇಷಣೆ ಮಾಡಿದೆ.

# 12. ಚರ್ಚೆಗಳು

ಅಧ್ಯಯನ ತಂಡಗಳ ಭೇಟಿಯವಧಿಯಲ್ಲಿ ಕಂಡು ಬಂದ ಅಂಶಗಳು ಕೆಳಕಂಡಂತಿವೆ.

ಎಲ್ಲಾ ಸಂಸ್ಥೆಗಳು ಅನುದಾನವನ್ನು ಪಡೆದಿವೆ ಮತ್ತು ಕೊಟ್ಟಿಗೆಗಳು ಕೊಳವೆ ಭಾವಿಗಳನ್ನು ನಿರ್ಮಿಸಿವೆ ಅಲ್ಲದೆ ಮೇವಿನ ಬೆಳೆಗಳನ್ನು ಬೆಳೆಯುತ್ತಿವೆ ಮತ್ತು ಅನುದಾನವನ್ನು ನೀಡಿರುವ ಉದ್ದೇಶಕ್ಕಾಗಿಯೇ ಉಪಯೋಗಿಸಿರುವುದು ಕಂಡುಬಂದಿರುತ್ತದೆ.

ಎಲ್ಲಾ ಸಂಸ್ಥೆಗಳೂ ಅನುದಾನ ಸಾಕಾಗಲಿಲ್ಲವೆಂದೂ, ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ಹೇಳಿರುತ್ತವೆ. ಆದರೆ ಇದು ಒಂದು ಬಾರಿ ಮಾತ್ರ ಕೊಡುವ ಅನುದಾನ ಎಂಬ ವಿಷಯ ತಿಳಿದಿಲ್ಲವೆಂದು ತೋರುತ್ತದೆ.

ಎಲ್ಲಾ ಸಂಸ್ಥೆಗಳೂ, ಸಮಾಜಕ್ಕೆ ಬೇಡದ, ಅನುತ್ಪಾದಕ ಹಾಗೂ ಅನಾರೋಗ್ಯ ಪೀಡಿತ ರಾಸುಗಳನ್ನು ಇಟ್ಟುಕೊಂಡು ಮಾನವೀಯತೆಯ ಮೇರೆಗೆ ಸಾಕುತ್ತಿರುವ ಮೂಲಕ ಗೋಶಾಲೆ, ಗೋಸದನ ಹಾಗೂ ಪಿಂಜ್ರಾಪೋಲ್‌ಗಳಂತೆ ಕಾರ್ಯ ನಿರ್ವಹಿಸುತ್ತಿವೆ.

ಎಲ್ಲಾ ಸಂಸ್ಥೆಗಳ ತಳಿ ಅಭಿವೃದ್ಧಿ ಜ್ಞಾನ ತೀರಾ ಕಡಿಮೆ ಅಲ್ಲದೆ ವೈಜ್ಞಾನಿಕವಂತೂ ಖಂಡಿತ ಅಲ್ಲ.

ಯಾವುದೇ ಸಂಸ್ಥೆ ಸ್ಥಾಪಿತ ತಳಿಯ ದನಗಳನ್ನು ತಳಿ ಅಭಿವೃದ್ಧಿಗಾಗಿ ಇಟ್ಟಿರುವುದಿಲ್ಲ.

ಯಾವುದೇ ಸಂಸ್ಥೆ ತಳಿಅಭಿವೃದ್ಧಿಗಾಗಿ ಕೃತಕಗರ್ಭಧಾರಣೆ ಅನುಸರಿಸಿರುವುದಿಲ್ಲ ಮತ್ತು ತಳಿ ಅಭಿವೃದ್ಧಿಯಲ್ಲಿ ಪ್ರಮುಖಾಂಶವಾದ ಕೃತಕ ಗರ್ಭಧಾರಣೆ ವಿಧಾನಕ್ಕೆ ಅವರು ವಿರೋಧಿಗಳೆಂದು ಹೇಳಿದ್ದಾರೆ, ತನ್ಮೂಲಕ ಯೋಜನೆಯ ಉದ್ದೇಶವನ್ನೇ ವಿಫಲಗೊಳಿಸಿರುತ್ತಾರೆ.

ಮಲೆನಾಡುಗಿಡ್ಡ ತಳಿಯ ವಿಷಯದಲ್ಲಿ ಹೇಳುವುದಾದರೆ, ಯಾವುದೆ ತಳಿ ವೃದ್ಧಿಯ ಕ್ರಮಗಳನ್ನು ಕೈಗೊಂಡಿಲ್ಲ ಮತ್ತು ಹೆಚ್ಚಿನ ಸಂಖ್ಯೆಯ ಕಸಿ ಮಾಡದ ಗಂಡುಗಳನ್ನು ಹೆಣ್ಣುಗಳೊಡನೆ ಮೇಯಲು ಬಿಡುವುದರಿಂದ ಅನಿರ್ಭಂದಿತ ತಳಿವೃದ್ಧಿ ಕ್ರಮವಾಗಿರುತ್ತದೆ. ಅವುಗಳನ್ನು ಅವೈಜ್ಞಾನಿಕವಾಗಿ ಇರಿಸಲಾಗುತ್ತಿದೆ.

ಈ ಯೋಜನೆಯನ್ನು ಮೇಲ್ವಿಚಾರಣೆ ಮಾಡಿ, ಸಲಹೆ ಸೂಚನೆಗಳನ್ನಿತ್ತು ಮುನ್ನಡೆಸಬೇಕಾಗಿದ್ದ ಪಶುಸಂಗೋಪನಾ ಮತ್ತು ಪಶುವೈದ್ಯಕೀಯ, ಸೇವೆಗಳ ಇಲಾಖಾ ಅಧಿಕಾರಿಗಳು, ಕೇವಲ ಕೊಟ್ಟ ಹಣಕ್ಕೆ ಸದ್ವಿನಿಯೋಗ ಪತ್ರ ಪಡೆದಿದ್ದಾರೆಯೇ ಹೊರತು ಬೇರೆ ಯಾವುದೇ ಕ್ರಮವಹಿಸಿಲ್ಲ.

ಸ್ವಯಂ ಸೇವಾ ಸಂಸ್ಥೆಗಳಿಗೆ ತಳಿಗಳ ತಳಿವೃದ್ಧಿ ಪ್ರದೇಶ, ಮೂಲ ಪ್ರದೇಶ, ತಳಿವರ್ಧನಾ ನೀತಿ ಇವುಗಳನ್ನು ತಿಳಿಸಬೇಕಾಗಿತ್ತು ಮತ್ತು ಅವರೂ ಅವುಗಳನ್ನು ಅನುಸರಿಸುವಂತೆ ಮಾಡಬಹುದಾಗಿತ್ತು. ಯಾವುದೇ ಸಂಸ್ಥೆ ಪ್ರಗತಿ ವರದಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಸಲ್ಲಿಸ ಬೇಕಾಗಿದ್ದು ಸಲ್ಲಿಸಿಯೇಇಲ್ಲ.

ಕೆಲವು ಸ್ವಯಂ ಸೇವಾ ಸಂಸ್ಥೆಗಳು, ತಳಿ ಅಭಿವೃದ್ಧಿ ಕೇಂದ್ರಗಳಾಗುವ ಬದಲು ತಳಿ ಪ್ರಾತ್ಯಕ್ಷಿಕೆಗಳಾಗಿ ಮಾತ್ರ ಕಾರ್ಯನಿರ್ವಹಿಸುತ್ತಿವೆ.

ಭೇಟಿ ನೀಡಲಾದ ಯಾವುದೇ ಕೇಂದ್ರ, ತಳಿಅಭಿವೃದ್ಧಿಯಲ್ಲಿ ಅತ್ಯಂತ ಅಗತ್ಯವಾದ, ಹುಟ್ಟಿದ ಕರುಗಳ ಮಾಹಿತಿ, ಉತ್ಪಾದಿಸಿದ ಹಾಲು ಹುಟ್ಟಿದಾಗ ಕರುವಿನ ತೂಕ ಮುಂತಾದ ಮಾಹಿತಿಗಳನ್ನು ಇಟ್ಟಿಲ್ಲ.

ಸಂಸ್ಥೆಗಳ ತಳಿವೃದ್ಧಿ ಸಾಮರ್ಥ್ಯ ಪ್ರತೀ ವರ್ಷ ಇಳಿಮುಖವಾಗಿದ್ದು ಅವುಗಳ ಕಾರ್ಯ ನಿರ್ವಹಣೆ ಪ್ರಶ್ನಾರ್ಹವಾಗಿಯೇ ಇವೆ.

ಯಾವುದೇ ಸಂಸ್ಥೆ ಅಸಕ್ತ ರೈತರಿಗೆ ತಳಿವೃದ್ಧಿಗಾಗಿ ಕರುಗಳನ್ನು ಮಾರಾಟ ಮಾಡಿಲ್ಲ ಮತ್ತು ಪಶುಪಾಲನಾ ಇಲಾಖೆ ಮಾರಾಟದ ದರಗಳನ್ನು ನಿಗದಿಗೊಳಿಸಿಲ್ಲ.

ಪಶುಪಾಲನಾ ಇಲಾಖೆ ನಿಯತಕಾಲಿಕೆ ಪ್ರಗತಿ ವರದಿಗಳ ಯಾವುದೇ ನಮೂನೆಗಳನ್ನೂ ನಿಗದಿಪಡಿಸಿದಂತೆ ಕಂಡುಬಂದಿಲ್ಲ.

ಯಾವುದೇ ಪರಾಮರ್ಶೆ ನಡೆಸಿದಂತೆ ಕಾಣುತ್ತಿಲ್ಲ. ಕೇಳಲಾದ ಅಗತ್ಯ ಮಾಹಿತಿಗಳನ್ನು ಸಂಪೂರ್ಣವಾಗಿ ಇಲಾಖೆ ಒದಗಿಸಿಲ್ಲ.

## 13. ಮೌಲ್ಯಮಾಪನ ಅಧ್ಯಯನದ ಸಂಶೋಧನೆಗಳು

(1)ಮೌಲ್ಯಮಾಪನೆಗಾಗಿ ಆಯ್ಕೆ ಮಾಡಲಾದ ಐದು ಸಂಸ್ಥೆಗಳ ಪೈಕಿ ಮೂರು ಸಂಸ್ಥೆಗಳನ್ನು ಅನುದಾನ ನೀಡಲು ಆಯ್ಕೆ ಮಾಡಿರುವುದು ಸರ್ಕಾರೀ ಆದೇಶ ಸಂಖ್ಯೆ ಪಸಂಮೀ.53.ಪಪಾಯೋ 2006, ದಿನಾಂಕ 19.12.2006 ಮತ್ತು ತದನಂತರ ಆ ಆದೇಶಕ್ಕೆ ಹೊರಡಿಸಲಾದ ಮೂರು ತಿದ್ದುಪಡಿಗಳ ವಿರುದ್ಧವೆಂದು ಕಂಡು ಬಂದಿದೆ ಅವು ಕೆಳಕಂಡಂತಿವೆ.

| ಕ್ರ. ಸಂ | ನಿಗದಿಗೊಳಿಸಲಾದ ಅರ್ಹತೆ | ವಾಸ್ತವಿಕವಾಗಿ ಅನುಸರಣೆ | | | | |
|---|---|---|---|---|---|---|
| | | ಅಮೃತಧಾರ ಗೋಶಾಲೆ ಹೊಸನಗರ | ಶ್ರೀ.ಕ್ಷೇತ್ರ ಧರ್ಮಸ್ಥಳ ಗೋಶಾಲೆ, ಕೊಕ್ಕಡ | ನಂದಗೋಕುಲ ಟ್ರಸ್ಟ್, ಉಡುಪಿ | ಅಮೃತಧಾರ ಗೋಶಾಲೆ, ಗೋಳಿಗುಂಡಿ ಉತ್ತರ ಕನ್ನಡ | ಎಸ್.ಜಿ.ಎಸ್.ಬಿ.ವಿ. ಟ್ರಸ್ಟ್ ರಾಯಚೂರು |
| 1 | ಸಂಸ್ಥೆ ಕಡೇ ಪಕ್ಷ 50 ದೇಶೀ ತಳಿಯ ದನಗಳನ್ನು ಒಂದು (1) ವರ್ಷದಿಂದಲಾದರೂ ಸಾಕುತ್ತಿರಬೇಕು | ಅನುಸರಿಸಿದೆ | ಅನುಸರಿಸಿದೆ | ಅನುಸರಿಸಿಲ್ಲ. ಸಂಸ್ಥೆ ಕೇವಲ 20 ರಾಸುಗಳನ್ನು ಹೊಂದಿತ್ತು ಎಂದು ತಿಳಿಸಿದೆ. | ಅನುಸರಿಸಿದೆ | ಅನುಸರಿಸಿದೆ |
| 2 | ಸಂಸ್ಥೆ ಸ್ಥಳೀಯ ತಳಿಗಳ ತಳಿವರ್ಧನೆ ಕಾರ್ಯವನ್ನು ಯೋಜನೆ ಪ್ರಾರಂಭವಾಗುವುದಕ್ಕೆ ಕಡೇಪಕ್ಷ ಒಂದು ವರ್ಷದಿಂದ ತೊಡಗಿಕೊಂಡಿರಬೇಕು. | ಸಾಕ್ಷ್ಯಾಧಾರಗಳಿಲ್ಲ | ಸಾಕ್ಷ್ಯಾಧಾರಗಳಿಲ್ಲ | ಸಾಕ್ಷ್ಯಾಧಾರಗಳಿಲ್ಲ | ಸಾಕ್ಷ್ಯಾಧಾರಗಳಿಲ್ಲ | ಸಾಕ್ಷ್ಯಾಧಾರಗಳಿಲ್ಲ |
| 3 | ಸಂಸ್ಥೆ ಕನಿಷ್ಠ 10 ಎಕರೆ ಜಮೀನನ್ನು ಹೊಂದಿರಬೇಕು ಇಲ್ಲವಾದಲ್ಲಿ, ಕರ್ನಾಟಕ ಜಮೀನು ಮಂಜೂರಾತಿ ಆದೇಶದ 19ನೇ ವಿಧಿಯನ್ವಯ ಅಗತ್ಯ ಭೂಮಿಯನ್ನು ಪಡೆಯಬಹುದಾಗಿದೆ. | ಅನುಸರಿಸಿದೆ | ಅನುಸರಿಸಿಲ್ಲ | ಅನುಸರಿಸಿಲ್ಲ | ಅನುಸರಿಸಿಲ್ಲ | ಅನುಸರಿಸಿದೆ. |

ಶಿವಮೊಗ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಸಂಸ್ಥೆಗಳು ಕನಿಷ್ಟ 2 ವರ್ಷಗಳ ಅವಧಿಯಲ್ಲಿ ಜಾನುವಾರು ಸಂವರ್ಧನೆಯಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಪುರಾವೆ ನೀಡದಿರುವಷ್ಟರ ಮಟ್ಟಿಗೆ ಮಾತ್ರ ಅನುಸರಣೆಯಾಗಿಲ್ಲವೆಂದು ಮಾತ್ರ ಕಂಡು ಬರುತ್ತದೆ.

(2)ಯಾವುದೇ ಸಂಸ್ಥೆ ತಾವು ಪಡೆದ ಅನುದಾನಕ್ಕೆ ಪರಿಪೂರ್ಣ ಸದ್ವಿನಿಯೋಗ ದಾಖಲೆ ಒದಗಿಸಿರುವುದಿಲ್ಲ. ಆದುದರಿಂದ ಅವರು ಖರ್ಚು ಮಾಡಿದ್ದೇವೆ ಎಂದು ಹೇಳುವ ಯಾವುದೇ ಬಾಬ್ತಿಗೆ ಎಂದರೆ ಕಟ್ಟಡದ ಅಥವಾ ಮೇವಿನ ತಾಕುಗಳ ಸ್ಥಾಪನೆ ಇತ್ಯಾದಿಗಳಿಗಾಗಿ ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆಂದು ತಿಳಿಯುವುದು ಸಾಧ್ಯವಿಲ್ಲ. ಸದ್ರಿ ಸಂಸ್ಥೆಗಳು ಈ ಅನುದಾನದೊಂದಿಗೆ ಇತರೇ ಸಂಸ್ಥೆ ಅಥವಾ ದಾನಿಗಳಿಂದಲೂ ಸಹಾ ಹಣ ಪಡೆದಿರುವ ಸಾಧ್ಯತೆಗಳಿರಬಹುದು ಅಥವಾ ಈಗಿರುವ ಕಟ್ಟಡಗಳು/ ಮೇವಿನ ತಾಕುಗಳು ಇತ್ಯಾದಿಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಿಂತಲೂ ಮೊದಲೇ ಇದ್ದಿರಬಹುದಾಗಿದ್ದು ಈಗ ಪಡೆದ ಅನುದಾನವನ್ನು ಅದರ ಲೆಕ್ಕಕ್ಕೆ ತೋರಿಸಿರುವ ಸಂಭವವಿದ್ದು ಈ ಬಾಬ್ತಿನ ಖರ್ಚುವೆಚ್ಚಗಳನ್ನು ಖಚಿತ ಪಡಿಸಲು ಯಾವುದೇ ದರಗಳು (ಮಾರುಕಟ್ಟೆ ಅಥವಾ ಲೋಕೋಪಯೋಗಿ ಇಲಾಖೆ) ಕಟ್ಟಲಾದ ಕಟ್ಟಡಗಳು ಅಥವಾ ತೆಗೆಸಲಾದ ಕೊಳವೆ ಬಾವಿಗಳು ತಾಂತ್ರಿಕವಾಗಿ ಸರಿಯಾಗಿವೆಯೇ, ಅವುಗಳ ಗುಣಮಟ್ಟಸರಿಯಿದೆಯೇ ಎಂಬುದರ ಬಗ್ಗೆ ಅವರು ಯಾವುದೇ ಸಮುಚಿತ ದಾಖಲೆಗಳನ್ನಿಟ್ಟಿಲ್ಲ ಮತ್ತು ಆ ಬಗ್ಗೆ ಯಾವುದೇ ಸರ್ಕಾರೀ ಅಧಿಕಾರಿಗಳ ಧೃಡೀಕರಣಗಳಿಲ್ಲ.

(3)ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿ, ಯೋಜನೆಯ ಕಾರ್ಯಗಳ ಅನುಸರಣೆ ಮಾಡಿಲ್ಲ. ಆದುದರಿಂದ, ಪಶುಪಾಲನಾ ಇಲಾಖೆ ಒದಗಿಸಿರುವ ದಾಖಲೆಗಳಿಗೂ ಸಂಸ್ಥೆಗಳು ಒದಗಿಸಿರುವ ದಾಖಲೆಗಳಿಗೂ ತಾಳೆಯಾಗುತ್ತಿಲ್ಲ ಹಾಗೂ ಮೌಲ್ಯಮಾಪನದ ಸಮಯದಲ್ಲಿದ್ದ ಜಾನುವಾರುಗಳ ಸಂಖ್ಯೆಯಲ್ಲಿ ಸಹಾ ವ್ಯತ್ಯಾಸಗಳಿರುವುದು ಕಂಡುಬಂದಿದೆ.

(4)ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು, ಈ ಯೋಜನೆಯಡಿಯಲ್ಲಿ ಯಾವುದೇ ಗುರಿಗಳನ್ನೂ ನಿಗದಿಪಡಿಸಿಲ್ಲ ಅಲ್ಲದೇ ಯಾವುದೇ ತಪಾಸಣೆ/ ಅನುಸರಣೆಯನ್ನು ಮಾಡಿಲ್ಲ.

(5)ಇಲಾಖೆಯು ಯಾವುದೇ ಸಂಸ್ಥೆಗಳಿಗೆ ತಳಿವರ್ಧನಾ ಕಾರ್ಯಕ್ಕಾಗಿ ದೇಶೀತಳಿಗಳ ವೀರ್ಯನಳಿಕೆಗಳನ್ನೊದಗಿಸಿಲ್ಲ. ಇದು ಸರ್ಕಾರೀ ಆದೇಶ ಸಂಖ್ಯೆ ಪಸಂಮೀ.53.ಪಪಾಯೋ.2006 ದಿನಾಂಕ 19.12.2006 (ಇದಕ್ಕೆ ತದನಂತರ ಹೊರಡಿಸಲಾದ ತಿದ್ದುಪಡಿಗಳನ್ನು ಗಮನಿಸಿ)ರ ಉಲ್ಲಂಘನೆಯಾಗಿರುತ್ತದೆ. ಯಾವುದೇ ಸಂಸ್ಥೆ, ಕೃತಕ ಗರ್ಭಧಾರಣೆಯನ್ನು ಅನುಸರಿಸಿಲ್ಲ ಮತ್ತು ಉಡುಪಿ ಜಿಲ್ಲೆಯ ಗೋಳಿಗುಂಡಿಯಲ್ಲಿರುವ ಸಂಸ್ಥೆ ಕೃತಕ ಗರ್ಭಧಾರಣೆ ಅವರ ನೀತಿಗೆ ವಿರುದ್ಧ ಎಂದು ತಿಳಿಸಿದೆ.

(6)ಸರ್ಕಾರೀ ಆದೇಶ ಸಂಖ್ಯೆ ಪಸಂಮೀ.53.ಪಪಾಯೋ.2006 ದಿನಾಂಕ 19.12.2006 (ಇದಕ್ಕೆ ತದನಂತರ ಹೊರಡಿಸಲಾದ ತಿದ್ದುಪಡಿಗಳನ್ನು ಗಮನಿಸಿ) ಪ್ರಕಾರ ಸಂಸ್ಥೆಗಳು ಈ ಯೋಜನೆಯಲ್ಲಿ ಜನಿಸಿದ ಕರುಗಳನ್ನು, ಆಸಕ್ತ ರೈತರಿಗೆ, ಸರ್ಕಾರ ನಿಗದಿಪಡಿಸಿದ ದರಗಳಲ್ಲಿ ಮಾರಾಟ ಮಾಡಬೇಕೆಂದು ನಿಗದಿಪಡಿಸಿದೆ. ಮೌಲ್ಯಮಾಪನದ ಸಮಯದಲ್ಲಿ ಪರಿಗಣಿಸಲಾದ(ಮಾದರಿಗಳಲ್ಲಿ) ತಳಿವೃದ್ಧಿಗಾಗಿ ಯಾವುದೇ ಸಂಸ್ಥೆ ಕರುಗಳನ್ನು ಮಾರಾಟ ಮಾಡಿರುವ ಬಗ್ಗೆ ದಾಖಲೆಗಳನ್ನಿಟ್ಟಿಲ್ಲದಿರುವುದು ಕಂಡುಬಂದಿದೆ. ಸರ್ಕಾರ ಸಹ ಈ ಯೋಜನೆಯ ಅನುಷ್ಠಾನದ ಯಾವುದೇ ಸಮಯದಲ್ಲಿ ಕರುಗಳ ಮಾರಾಟದ ದರಗಳನ್ನು ನಿಗದಿಪಡಿಸಿಲ್ಲ.

(7)ಮೇಲ್ಕಾಣಿಸಿದ ಸರ್ಕಾರೀ ಆದೇಶವು ಪ್ರತಿ ಸಂಸ್ಥೆಯೂ ಗೋಮೂತ್ರ ಹಾಗೂ ಗವ್ಯ ಉತ್ಪನ್ನಗಳನ್ನು ಆಗಿಂದಾಗ್ಗೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕಾ ವಿಶ್ವವಿದ್ಯಾಲಯದಿಂದ

ವಿಶ್ಲೇಷಣೆ ಮಾಡಿಸಿ ಅದರ ದಾಖಲೆಗಳನ್ನಿಡಬೇಕೆಂದು ನಿರ್ದಿಷ್ಟಪಡಿಸಿದ್ದರೂಸಹಾ ಯಾವುದೆ ಸಂಸ್ಥೆ ಈ ಕ್ರಮ ಕೈಗೊಂಡಿಲ್ಲ.

(8)ಸರ್ಕಾರೀ ಆದೇಶದಲ್ಲಿ ತಳಿವರ್ಧನೆಗಾಗಿ ಉಪಯೋಗಿಸುವ ಜಾನುವಾರುಗಳನ್ನು ಸೂಕ್ತ ಕಿವಿಯೋಲೆ ಹಾಕುವ ಮೂಲಕ ಗುರ್ತಿಸಬೇಕು, ವಂಶಾವಳಿ ದಾಖಲೆಗಳನ್ನು ಮತ್ತು ಕಾರ್ಯಕ್ಷಮತೆಗಳ ದಾಖಲೆಗಳನ್ನು ಇಡಬೇಕು, ಮಾಸಿಕ, ಆರ್ಥಿಕ ಹಾಗೂ ಭೌತಿಕ ವರದಿಗಳನ್ನು ಸಲ್ಲಿಸಬೇಕೆಂದೂ, ನಿಗದಿಪಡಿಸಿದೆಯಾದರೂ ಪರಿಗಣಿಸಲಾದ ಯಾವುದೇ ಸಂಸ್ಥೆ ಈ ನಿಬಂಧನೆಯನ್ನು ಅನುಸರಿಸಿಲ್ಲ.

ವಿವಿಧ ತಳಿಗಳ ಹೋರಿಗಳು, ಎಲ್ಲಾ ಜಾನುವಾರುಗಳೊಡನೆ ಅದರಲ್ಲೂ ಹಸುಗಳೊಡನೆ ಅನಿರ್ಭಂಧಿತವಾಗಿ, ಅಡ್ಡಾಡುತ್ತಿರುವುದು ಕಂಡು ಬಂದಿದೆ. ತಳಿವರ್ಧನೆಗಾಗಿ ಉಪಯೋಗಿಸಲಾಗುತ್ತಿರುವುದೆಂದು ಹೇಳಲಾದ ಹಸುಗಳನ್ನು, ಮುದಿ, ಅನುಪಯುಕ್ತ, ಅಶಕ್ತ (ಮಾನವೀಯತೆ ಆಧಾರದಲ್ಲಿ ತರಲಾದ), ಜಾನುವಾರುಗಳೊಡನೆ ಇರಿಸಿರುವುದು ಕಂಡು ಬಂದಿದೆ. ತನ್ಮೂಲಕ, ಎಲ್ಲಾ ಸಂಸ್ಥೆಗಳ ತಳಿವರ್ಧನೆ ಕಾರ್ಯ ಅವೈಜ್ಞಾನಿಕವಾಗಿದ್ದು, ಈ ಯೋಜನೆಯ ಮಾರ್ಗಸೂಚಿಗಳ ವಿರುದ್ಧವಾಗಿರುತ್ತವೆ.

(9)ಸರ್ಕಾರೀ ಆದೇಶವು, ಪ್ರತೀ ಸಂಸ್ಥೆಯೂ, ತಮ್ಮ ಹಣಕಾಸಿನ ವ್ಯವಹಾರಗಳ ವಾರ್ಷಿಕ ತಪಾಸಣೆ ಮಾಡಿಸಿ, ಅದರ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ನಿರ್ದಷ್ಟಪಡಿಸಿದ್ದರೂ ಸಹಾ ಯಾವುದೇ ಸಂಸ್ಥೆ ಇದನ್ನು ಅನುಸರಿಸದೆ, ಉಲ್ಲಂಘಿಸಿರುವುದು ಕಂಡು ಬಂದಿದೆ.

(10)ಒಟ್ಟಾರೆ, ಎಲ್ಲಾ ಸಂಸ್ಥೆಗಳೂ, ಸರ್ಕಾರೀ ಆದೇಶ ಸಂಖ್ಯೆ ಪಸಂಮೀ.53.ಪಪಾಯೋ.2006, ದಿನಾಂಕ 19.12.2006ರ (ತತ್ಸಂಬಂಧದ ತಿದ್ದುಪಡಿಗಳನ್ನೂ ಸೇರಿಸಿ) ಅನ್ವಯ ನಿಗದಿಪಡಿಸಿರುವ ಮಾರ್ಗಸೂಚಿಗಳು, ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿರುವುದು ಮೌಲ್ಯಮಾಪನಾ ಸಂದರ್ಭದಲ್ಲಿ ಕಂಡು ಬಂದಿದೆ. ಆದುದರಿಂದ ಈ ಯೋಜನೆ ವಿಫಲವಾಗಿದೆಯೆಂದು ಹೇಳಬಹುದಾಗಿದೆ.

# 14. ಶಿಫಾರಸ್ಸುಗಳು

(1)"ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆ" ಯನ್ನು ಸರ್ಕಾರೀ ಆದೇಶ ಸಂಖ್ಯೆ ಪಸಂಮೀ.53.ಪಪಾಯೋ.2006, ದಿನಾಂಕ.19.12.2006 (ತತ್ಸಂಬಂಧದ ತಿದ್ದುಪಡಿಗಳನ್ನು ಸೇರಿಸಿ) ರನ್ನು, ಉಲ್ಲಂಘಿಸಿ, ಅನುಷ್ಠಾನಗೊಳಿಸಲಾಗಿರುವುದು ಸ್ಪಷ್ಟವಾಗಿದೆ.

ದೇಶೀ ತಳಿಗಳ ಸಂವರ್ಧನೆ, ಅತ್ಯಂತ ಮಹತ್ವದ್ದೆಂದು, ವೇದ್ಯವೇ ಆಗಿದ್ದು ಯೋಜನೆಯನ್ನು ಸರಳ ಹಾಗೂ ಕಾರ್ಯಸಾಧ್ಯ ರೀತಿಯಲ್ಲಿ ಅನುಷ್ಠಾನಗೊಳಿಸಲು ಆಯೋಜಿಸಲಾಗಿತ್ತು (ಉದ್ದೇಶಿಸಲಾಗಿತ್ತು.) ಆದರೆ ಇದು ಅನುಷ್ಠಾನದಲ್ಲಿನ ತಪ್ಪುಗಳಿಂದಾಗಿ ವಿಫಲವಾಗಿದೆ.

ಆದುದರಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಬೇಕೆಂದು ಸೂಚಿಸಲಾಗಿದೆ.

(2)ಮೇಲ್ಕಂಡ ಸರ್ಕಾರೀ ಆದೇಶದನ್ವಯ ಯಾವುದೇ ಸಂಸ್ಥೆ ಈ ಯೋಜನೆಯ ಮಾರ್ಗಸೂಚಿ, ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಅವುಗಳಿಂದ ಅವುಗಳ ಆಸ್ತಿಗಳನ್ನು (ಯೋಜನೆಯಡಿಯಲ್ಲಿ ಪಡೆದಿದ್ದಲ್ಲಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ಜಮೀನನ್ನು ಈ ಯೋಜನೆಯಲ್ಲಿ ಪಡೆಯಲಾಗಿದ್ದಲ್ಲಿ ಅದನ್ನು ಸರ್ಕಾರ ವಾಪಸು ಪಡೆಯಬಹುದಾಗಿದೆ. ಕೊಡಲಾದ ಅನುದಾನವನ್ನು ಭೂಕಂದಾಯ ಬಾಕಿಯಂತೆ ವಸೂಲ್ಮಾಡಿಕೊಳ್ಳ ಬಹುದಾಗಿದೆಯಲ್ಲದೆ, ಸಂಸ್ಥೆಗಳ ಪದಾಧಿಕಾರಿಗಳಿಂದಲೂ ವಸೂಲ್ಮಾಡಬಹುದಾಗಿದೆ. ವಿಶ್ಲೇಷಿತ ಮಾದರಿಗಳಾದ ಐದೂ ಸಂಸ್ಥೆಗಳು ನಿರ್ದಿಷ್ಟಪಡಿಸಲಾದ ಅನೇಕ ಷರತ್ತು ಹಾಗೂ ನಿಬಂಧನೆಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿದೆ. ಆದುದರಿಂದ ಈ ಸಂಸ್ಥೆಗಳಿಗೆ ಕೊಡಲಾದ ಅನುದಾನಗಳನ್ನು ಸರ್ಕಾರೀ ಆದೇಶದ ಪ್ರಕಾರ ವಸೂಲಾತಿ ಮಾಡಲು ಶಿಫಾರಸು ಮಾಡಲಾಗಿದೆ.

ಈ ಮೌಲ್ಯಮಾಪನೆಗೆ ಒಳಪಡದೇ ಇರುವ ಇನ್ನಿತರ ಇಂತಹುದೇ ಸಂಸ್ಥೆಗಳ ಬಗ್ಗೆ, ವಿಶೇಷ ಮೌಲ್ಯಮಾಪನೆ ಮಾಡಿಸಿ, ಉಲ್ಲೇಖಿತ ಸರ್ಕಾರಿ ಆಜ್ಞೆಯ ಷರತ್ತು ಹಾಗೂ ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ, ಈ ಐದು ಸಂಸ್ಥೆಗಳ ವಿರುದ್ಧ ಜರುಗಿಸುವ ಕ್ರಮಗಳನ್ನೇ, ಆ ಸಂಸ್ಥೆಗಳಿಗೂ ಅನ್ವಯಿಸಬಹುದೆಂದು ಶಿಫಾರಸ್ಸು ಮಾಡಲಾಗಿದೆ.

# 15. ಆಭಾರ ಮತ್ತು ಉಲ್ಲೇಖಗಳು

ಮೌಲ್ಯಮಾಪಕರ ತಂಡ ಕೆಳಕಂಡ ಸಂಸ್ಥೆ / ವ್ಯಕ್ತಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.
(1) ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಅನುವು ಮಾಡಿಕೊಟ್ಟ ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು

(2) ಕರ್ನಾಟಕ ಸರ್ಕಾರದ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ

(3) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

(4) ಸರ್ವೇಕ್ಷಣ ನಡೆಸಿದ ತಂಡಗಳು

(5) ಶ್ರೀ ದೇಶಯ್ಯ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗ

## ಉಲ್ಲೇಖಗಳು

1. Recommendation of the National Commissioner on Cattle, 2002 Chapter VII

2. FAO 2007a

   Commission of Genetic Resources for Food & Agriculture Organisation, United Nation, Rome, Italy Page 77-100.

   2007b – Pages 23-48

3. Bangladesh Agriculture University 8 (i): 113-120 – 2010

   Constraints in native cattle genetic resources.

   Conservation and features of breeding system in representative areas of Bangladesh.

   M.A.Quddus, Dept. Of Agriculture & M.R.Amin, Department of Animal Genetics and Breeding, Bangladesh Agriculture University.

4.Dept. of Animal Husbandry , Dairying and Fisheries – Breeds of livestock – Retrieved 2009-12-1

5.Falconer, D.S. and T.F.W.Makay, 1996. Introduction to Quantitative Genetics (4th edition)

# ಲಗತ್ತುಗಳು